Reg.No. M. 1550.
KODAGU" MERCARA, (Coorg).

ಕೊಡಗು

ಸಂಪಾದಕರು:—ಶ್ರೀ ಪಿ. ಐ. ಬೆಳ್ಯಪ್ಪ, ವಾರ್ಷಿಕ ಚಂದಾ: ರೂ: ೩—೮—೦.

ಸಂಪುಟ ೨೭ | ತಾರೀಕು ೩—೧೧—೧೯೪೪ನೇ ಶುಕ್ರವಾರ. | ಸಂಚಿಕೆ ೨೩

ಬತ್ತದ ಬೆಲೆ ಹೆಚ್ಚಿಸಬೇಕು.

ಕೊಡಗಿನ ಬತ್ತ ಬೆಳೆಸುವವರ ಪ್ರತಿನಿಧಿಗಳಾಗಿ ಜೇಫ್ ಕಮಿಷನರವರನ್ನು ಕಂಡು ಬತ್ತದ ಬೆಲೆಯನ್ನು ಏರಿಸುವ ಬಗ್ಗೆ ಮಾತಾಡಲು ನೇಮಕವಾದ ನಿಯೋಗಗೋಷ್ಠಿಯು ತಾರೀಕು 31-10-44 ರಲ್ಲಿ ಜೇಫ್ ಕಮಿಷನರನ್ನು ಕಂಡು ದೇಶದ ರೈತರ ಸ್ಥಿತಿಯನ್ನು ಈ ರೀತಿ ಸರಕಾರವ ಮುಂದಿಟ್ಟಿತು.

"ಈಗಿನ ಯುದ್ಧಬಲ್ಲಿ ಜನಜೀವನವನ್ನು ಅಸ್ತವ್ಯಸ್ತಗೊಂಡಿರುವ ಒಂದು ಪ್ರಾಮುಖ್ಯ ವಿಚಾರವೆಂದರೆ ಆಹಾರ ಪದಾರ್ಥಗಳ ಧಾರಣೆ ನಿಯಂತ್ರಣ. ನಿಯಂತ್ರಣದಲ್ಲಿಯೇ ಇಟ್ಟಿರುವುದರಿಂದ ತೆಗೆದು ಉಣ್ಣುವವರಿಗೆ ಮತ್ತು ಮಿಲಿಟರಿಯವರಿಗೆ ಯೋಗ್ಯ ಬೆಲೆಗೆ ಆಹಾರ ಪದಾರ್ಥಗಳು ದೊರೆಯಬೇಕೆಂಬುದಾಗಿದೆ. ಧಾರಣೆ ನಿಯಂತ್ರಣದ ತತ್ವವನ್ನು ಇಂದಿನಂಥಾ ಸಂದಿಗ್ಧ ಸಮಯದಲ್ಲಿ ಎಲ್ಲರೂ ಒಪ್ಪಿದರೂ ಬೆಳೆಸುವವನ ಹಿತವನ್ನು ಮರೆಯಲಾಗುವದಿಲ್ಲ. ಆದರೆ ದುರಾದೃಷ್ಟವಶಾತ್ ಈ ಸರಕಾರವು ಬೆಳೆಸಲು ಇರುವ ಖರ್ಚನ್ನು ಗಣನೆಗೆ ತಾರದೆ 1942 ರಲ್ಲಿ 120 ಪರಿಯ ಒಂದು ಗಾಡಿಗೆ ರೂ. 115 ಎಂದು ಭತ್ತದ ಕ್ರಯ ನಿಯಂತ್ರಿಸಿದೆ. ವ್ಯವಸಾಯದ ಮತ್ತು ಜೀವನ ಖರ್ಚುಗಳು ಹದ್ದುಮೀರಿ ಏರಿದ್ದರೂ ಈ ಬೆಲೆಯು ಬದಲಾಯಿಸಲ್ಪಟ್ಟಿಲ್ಲ. ಇದು ಬೆಳೆ ಬೆಳೆಯುವವರ ಹಿತಕ್ಕೆ ತೀರಾ ವಿರುದ್ಧವಾಗಿದೆ. ಆದ್ದರಿಂದ ದೇಶದ ಉದ್ದಗಲಕ್ಕೂ 120 ಪರಿಯ ಒಂದು ಗಾಡಿ ಬತ್ತಕ್ಕೆ ರೂ. 150 ಆದರೂ ದೊರೆಯಬೇಕೆಂಬ ಚಳವಳಿ ಹುಟ್ಟಿದೆ.

ಬತ್ತದ ಬೆಲೆಯನ್ನು ಏರಿಸುವ ಅವಶ್ಯಕತೆಯು ತೋರಿಬರಬೇಕಾದರೆ ಜೀವನಾವಶ್ಯಕ ವಸ್ತುಗಳ ಬೆಲೆಯು ಯುದ್ಧದ ಮೊದಲು ಹೇಗಿತ್ತು; ಈಗ ಹೇಗಿದೆಯೆಂಬುದರ ತಾರತಮ್ಯವನ್ನು ನೋಡಬೇಕು. ಗಗನಮುಟ್ಟಿದ ಬೆಲೆ, ಜನತೆಯ ಮೇಲೆ ಇದರಿಂದಾದ ದುಷ್ಪರಿಣಾಮಗಳ ವಿಷಯವು ಪತ್ರಿಕೆಗಳಲ್ಲಿ ಆಗಾಗ್ಗೆ ಪ್ರಕಟವಾಗಿವೆ. ಚರ್ಚಾತೀತವಾದ ವಿಷಯವಿದಾಗಿದ್ದರೂ ಸ್ಥಲ ವಿವರವಾಗಿ ಅದನ್ನು ಕೊಡಲಿಚ್ಚಿಸುವೆವು. ಇಲ್ಲಿ ಅಂಕೆಸಂಖ್ಯೆಗಳನ್ನು ಕೊಟ್ಟಿರುವದು ಸರಕಾರಕ್ಕೆ ಈ ವಿಚಾರವನ್ನು ಚೆನ್ನಾಗಿ ಮನದಟ್ಟುಪಡಿಸುವ ದೃಷ್ಟಿಯಿಂದಾಗಿದೆ. ಈ ಕೆಳಗಿನ ಬೆಲೆಯ ಏರುವಿಕೆಯನ್ನು ಅವಲೋಕಿಸಿದರೆ ದಿನಚರಿಯ ಜೀವನಕ್ಕೆ ಬೇಕಾದ ವಸ್ತುಗಳ ಬೆಲೆ ಶೇಕಡ 200 ರಿಂದ 400 ರ ಪರಿಗೆ ಏರಿದ್ದು ಕಂಡುಬರುವದು. ಯುದ್ಧಕ್ಕೆ ಮೊದಲಿಗೆ ಬೆಲೆಯನ್ನು ಬ್ಯಾಕೆಟನಲ್ಲಿ ಕೊಡಲಾಗಿದೆ:—ಒಂದು ಜೊತೆ ಕೋಣಗಳು ರೂ. 175 (ರೂ. 35) ಕಬ್ಬಿಣ 0-8-0 (0-1-6), ನೆಲಗಡಲೆ ಎಣ್ಣೆ 0-15-0 (0-7-0) ತೆಂಗಿನೆಣ್ಣೆ ರೂ. 1-4-0 (0-6-0) ಮೆಣಸು ರೂ. 1-2-0 (0-6-0), ತೊಗರಿ ಬೇಳೆ 0-7-0 (0-2-6) ಗೋಣಿ ಚೀಲ 0-12-0 (0-4-0) ಗಾಡಿ ಬಾಡಿಗೆ 0-12-0 (0-4-0) ಕೂಲಿ ತಲೆ ಒಂದರ 1-0-0 (0-4-0) ಕೊಡೆ ರೂ. 12-0-0 (2-12-0), ಬಟ್ಟೆ ಜೊತೆಗೆ ರೂ. 12-8-0 (5-0-0), ಶೀರೆ ರೂ. 12-0-0 (3-8-0) ತಾಂಬ್ರ ಸೇರಿಗೆ 2-0-0 (0-6-0) ತೆಂಗಿನಕಾಯಿ 100 ಕ್ಕೆ 10-0-0 (3-0-0). ಬತ್ತ ಬೆಳೆಸುವವನು ದಿನ ನಿತ್ಯದ ಎಲ್ಲ ಸಾಮಾನುಗಳನ್ನು ತಾನೇ ಬೆಳೆಸಿಕೊಳ್ಳಲಾರನಾದ್ದರಿಂದ ತನ್ನ ಬತ್ತವನ್ನು ಮಾರಿ ಆ ಆದಾಯದಿಂದ ಬೇರೆ ಸಾಮಾನುಗಳನ್ನು ಪಡೆಯಬೇಕಾಗಿದೆ. ಒಂದು ಸಾಮಾನಿನ ಧಾರಣೆಯನ್ನು ನಿಯಂತ್ರಿಸುವ ಕಾಲಕ್ಕೆ ಅದರ ಉತ್ಪಾದನೆಗೆ ತಗಲುವ ಖರ್ಚು ಮನಸಿಲ್ಲಿಡಬೇಕಾದ ಪ್ರಾಮುಖ್ಯ ಅಂಶವಾಗಿದೆ. ಈ ಕೆಳಗಿನ ಅಂಕೆಗಳು ಕೊಡಗಿನಲ್ಲಿ ಮೂರು ಏಕ್ರೆಯ ಭೂಮಿಯನ್ನು ವ್ಯವಸಾಯ ಮಾಡಲು ತಗಲುವ ಖರ್ಚನ್ನು, ಅದರಿಂದ ಬರುವ ಉತ್ಪತ್ತಿಯನ್ನು ತೋರಿಸುವವು. ಎತ್ತುಗಳ ಬಾಡಿಗೆ ಜೊತೆಗೆ 8 ಬಟ್ಟಿ ಬತ್ತದಂತೆ ರೂ. 60-0-0, ತಿಂಗಳಿಗೆ ರೂ 30 ರಂತೆ ನಾಟಿಕೆಲಸದ 2 ತಿಂಗಳುಗಳಿಗೆ ಒಬ್ಬ ಗಂಡು ಆಳಿಗೆ ಸಂಬಳ ರೂ. 60-0-0, ಒಬ್ಬ ಜಂಗಸು ಆಳಿಗೆ 1 ತಿಂಗಳಿಗೆ ರೂ. 20-0-0, ಬೀಜದ ಕ್ರಯ ರೂ. 8-0-0, ಗಾಡಿಗೆ ರೂ 2ರಂತೆ 10 ಗಾಡಿ ಗೊಬ್ಬರ ರೂ. 20-0-0 ಕಳೆತೆಗೆಯುವ ಖರ್ಚು ರೂ. 7-0-0, ಮೂರು ಏಕ್ರೆಗಳಿಗೆ ಕಂದಾಯ ರೂ. 10-0-0, ಕುಯಿಲಿಗೆ ಎರಡು ಆಳುಗಳಿಗೆ ಒಂದು ತಿಂಗಳಿಗೆ ಸಂಬಳ ರೂ. 60-0-0, ಇತರ ಖರ್ಚುಗಳು ರೂ. 10-0-0, ಭೂಮಿಯ ವಾರ್ಷಿಕ ದುರಸ್ತಿ ರೂ. 15-0-0 ಅನಿರೀಕ್ಷಿತ ಖರ್ಚು ರೂ. 10-0-0, ಜುಮ್ಮ ರೂ. 280-0-0.

3 ಏಕ್ರೆ ಭೂಮಿಯ ಸರಾಸರಿ ಆದಾಯ:—ಬತ್ತ 2½ ಗಾಡಿ. ಗಾಡಿಗೆ ರೂ. 115 ರಂತೆ ರೂ. 287-8-0, ಹುಲ್ಲಿನ ಆದಾಯ ರೂ. 15-0-0 ಜುಮ್ಮ ರೂ. 302-8-0. ನಿವ್ವಳ ಖರ್ಚನ್ನು ಕಳೆದರೆ ಉಳಿಕೆ ರೂ. 22-8-0. ರೂ. 22-8-0 ರ ಉಳಿಕೆಯು ಕಂಡುಬಂದರೂ ಇತರ ಅನೇಕ ಖರ್ಚುಗಳ ಮಾತಿರಲಿ; ರೈತನು ಪರ್ಸವಿಡೀ ಇಡಬೇಕಾದ ಮೇಲುಸ್ತುವಾರಿ ಚಾರ್ಜಿನ ಒಂದು ಭಾಗಕ್ಕೂ ಇದು ಸಾಲದು.

ದನಗಳು ರೈತನ ಬೆನ್ನೆಲುಬು ಎನ್ನುವದರಲ್ಲಿ ಯಾವ ಅತ್ಯುಕ್ತಿಯಿಲ್ಲ. ನಮ್ಮ ಪ್ರಾಂತವು ದನಗಳಿಗಾಗಿ ಮೈಸೂರನ್ನು ಆಶ್ರಯಿಸಿದೆ. ಸೈನಿಕರ ಆವಶ್ಯಕತೆಯ ದೆಸೆಯಿಂದ ಮೈಸೂರಿನಿಂದ ಆಮದಾಗುವ ದನಗಳ ಸಂಖ್ಯೆಯು ಯುದ್ಧ ಪ್ರಾರಂಭವಾದಂದಿನಿಂದ ಕಡಿಮೆಯಾಗುತ್ತಾ ಇದೆ. ಕಳೆದ ವರ್ಷ ನಾನಾರೀತಿಯ ಸಾಂಕ್ರಾಮಿಕ ರೋಗಗಳು ಮೈಸೂರಿನಲ್ಲಿ ಅಸಂಖ್ಯಾತ ದನಗಳನ್ನು ಆಹುತಿ ತೆಗೆದುಕೊಂಡವು. ಆದ್ದರಿಂದ ಆಮದಾಗುವ ಕೋಣಗಳ ಸಂಖ್ಯೆಯು ಬಹುತರ ಕಡಿಮೆಯಾಯಿತು. ಈ ಕಾರಣಗಳಿಂದ ಒಂದು ಜೊತೆ ಕೋಣಗಳ ಕ್ರಯವು ರೂ. 35 ರಿಂದ ರೂ. 175 ಕ್ಕೆ ಏರಿತು. ಕೆಲವು ಸಂದರ್ಭದಲ್ಲಿ ರೂ. 200 ಏರಿದ್ದಿತು. ಈ ರೀತಿಯ ವಿಪರೀತ ಬೆಲೆ ಕೊಡಬೇಕಾಗಿ ಬಂದರೂ ಕೊಂಡು ಕೊಂಡ ಜಾನುವಾರಗಳು ಖಾಯಿಲೆಯಿಂದ ಸತ್ತುಹೋಗದೆ ಮನೆಯಲ್ಲಿದ್ದ ದನಗಳೂ ಈ ಖಾಯಿಲೆಗೆ ಆಹುತಿಯಾದವು. ಕೊಡಗಿನಲ್ಲಿ ಕಳೆದ ಸಾಲಿನಲ್ಲಿ 10000 ದನಗಳು ಅಂದರೆ ರೂ. 8 ಲಕ್ಷ ರೂಪಾಯಿಯ ನಷ್ಟವಾಗಿದೆಯೆಂದು ಸುರಕ್ಷಿತವಾಗಿ ಹೇಳಬಹುದು. ಈ ಚಿಕ್ಕ ಪ್ರಾಂತಕ್ಕೆ ಇದು ತುಂಬಾ ಬಲಾಢ್ಯವಾದ ನಷ್ಟವಾಗಿದೆ.

ಕೊಡಗು ಬಹುತರವಾಗಿ ಮಲಬಾರು ಯಾ ದ. ಕನ್ನಡದಿಂದ ಬರುವ ಕೂಲಿಗಳನ್ನು ನಂಬಿದೆ. ಸೈನಿಕ ಬೇಡಿಕೆಯ ಕಾರಣ ಮಲಬಾರಿನ ಕೂಲಿಗಳು ಬೇರೆ ಕಡೆ ಹೋಗತೊಡಗಿದರು. ಬಂದ ಕೆಲವರೂ ಶೇಕಡ 300 ಕ್ಕಿಂಥಾ ಹೆಚ್ಚಿನ ಕೂಲಿ ಕೇಳತೊಡಗಿದರು. ಒಂದು ಉದಾಹರಣೆ ಕೊಡುವದಾದರೆ ದಿನಕ್ಕೆ ಊಟವಲ್ಲದೆ 0-4-0 ಗೆ ಕೆಲಸ ಮಾಡುತ್ತಿದ್ದ ಮಲಬಾರು ಕೂಲಿಯು ಇಂದು ಊಟವಲ್ಲದೆ ರೂ. 1-0-0 ದಿನಕ್ಕೆ ಕೇಳುತ್ತಿದ್ದಾನೆ. ಈ ಉಬ್ಬರದ ಬೆಲೆಯನ್ನು ಕೊಡಲು ರೈತನು ತಯಾರಿದ್ದರೂ ಬೇಕಾದಷ್ಟು ಕೂಲಿಗಳು ದೊರೆಯುವದು ಕಷ್ಟವಾಗಿದೆ. ದನಗಳ ಮತ್ತು ಕೂಲಿಗಳ ಅಭಾವವು ಸರಕಾರದ ಈಗಿನ 'ಹೆಚ್ಚು ಆಹಾರ ಬೆಳೆಯಿರಿ' ಎಂಬ ಪ್ರಚಾರಕ್ಕೆ ಪ್ರತ್ಯಕ್ಷ ಪ್ರತಿಭಟನೆ ಮಾಡಿದವು. ಈ ಕಾರಣಗಳಿಂದ ಕೊಡಗಿನಲ್ಲಿ 5000 ಏಕ್ರೆ ಭೂಮಿ ವ್ಯವಸಾಯವಾಗಲಿಲ್ಲವೆಂದು ನಿಸ್ಸಂಕೋಚವಾಗಿ ಹೇಳಬಹುದು.

ಹಿಂದೂದೇಶದ ಇತರ ಕಡೆಗಳಲ್ಲಂತೆಯೇ ಕೊಡಗಿನಲ್ಲೂ ಜೀವನ ಖರ್ಚು ಬಹು ತೀಕ್ಷ್ಣವಾಗಿ ಏರಿದೆ. ಬತ್ತವನ್ನು ಬಿಟ್ಟು ತನ್ನ ದಿನದ ಆವಶ್ಯಕಗಳಿಗೆ ಕೊಡಗು ನೆರೆಯ ಇತರ ಪ್ರಾಂತಗಳನ್ನು ಆಶ್ರಯಿಸಿದೆ. ರೈಲ್ವೆ ವಹಿವಾಟಿನ ಅಭಾವ ಮತ್ತು ಲಾರಿಗಳಿಗೆ ಪೆಟ್ರೋಲ್ ಹಸುಗೆಯು ಕಾರಣ ಕೊಡಗಿನಲ್ಲಿ ವಹಿವಾಟಿನ ದರವು ಇತರ ಕಡೆಗಳಿಗಿಂಥಾ ಬಹು ಹೆಚ್ಚಾಗಿದೆ. ತತ್ಪರಿಣಾಮವಾಗಿ ಈ ಪ್ರಾಂತದ ಜನರು ಆಮದಾಗುವ ಸಾಹಿತ್ಯಗಳಿಗೆ ಹೆಚ್ಚಿನ ದರ ಕೊಡಬೇಕಾಗಿದೆ.

ದನಗಳ ಮತ್ತು ಕೂಲಿಯ ತೊಂದರೆಯ ಜೊತೆಗೆ ಈ ವರ್ಷ, ಕೊಡಗಿನ ರೈತನು ತನ್ನ ವ್ಯವಸಾಯಕ್ಕಾಗಿ ಆಧರಿಸಿ ನಿಂತಿರುವ ಬೆಳೆಯು ಬಹು ಅತೃಪ್ತಿಕರವಾಗಿ ಆದ ಕಾರಣ ಈ ವರ್ಷ ಬೆಳೆಯು ಕಮ್ಮಿ ಪಕ್ಷ ಶೇಕಡ 40 ರಷ್ಟು ಕಡಮೆಯಾಗಬಹುದು. ಹಾಗೆದಗೆ ಕೊಡಗಿನ ಒಟ್ಟು ಉತ್ಪತ್ತಿಯಾದ 68,000 ಟನ್ನು ಬತ್ತದಲ್ಲಿ ಸುಮಾರು 20,000 ಕಡಿಮೆಯಾದಂತಾಯಿತು. ಇದರಿಂದ ಹೊರಗೆ ರವ್ವು ಮಾಡುವ ಉಳುವರಿ ಬತ್ತವು ಆವಶ್ಯಕವಾಗಿ 4 ರಿಂದ ಹತ್ತು ಸಾವಿರ ಟನ್ನುಗಳಷ್ಟು ಕಡಿಮೆಯಾಗುವದು. ಹೊರಗೆ ಕಳುಹಿಸುವ ಈ ಅಲ್ಪ ಪರಿಮಾಣದ ಉತ್ಪತ್ತಿಯು ಅವರ ನ್ಯಾಯಬದ್ಧವಾದ ಖರ್ಚುಗಳನ್ನು ನಿರ್ವಹಿಸಲು ಸಾಕಾಗಲಾರದು. ರೈತನಿಗೊದಗಿದ ಈ ನಷ್ಟವನ್ನು ಬತ್ತದ ಬೆಲೆಯನ್ನು ಯೋಗ್ಯರೀತಿ ಏರಿಸುವದರಿಂದ ಪೂರ್ತಿ ಸಮಗಟ್ಟಬಹುದು.

ನೆರೆಪ್ರಾಂತಗಳಾದ ದಕ್ಷಿಣ ಕನ್ನಡ, ಮಲಬಾರುಗಳಲ್ಲಿಯು ಪೇಟೆಧಾರಣೆಗಳನ್ನು ಪರೀಲಿಸಿದರೆ ಕೊಡಗಿನಲ್ಲಿ ನಿಶ್ಚಯಿಸಿದ ಬೆಲೆಯು ನಿಶ್ಚಯವಾಗಿಯೂ ಕಡಿಮೆಯಾಗಿದೆ. ಉದಾಹರಣೆಗೆ ಮಲಬಾರಿನಲ್ಲಿ ಜಿಲ್ಲೆ ಜಿಲ್ಲೆಗಳ ಬೆಲೆಯಲ್ಲಿ ಚಿಕ್ಕ ವ್ಯತ್ಯಾಸಗಳಿದ್ದರೂ ಗಾಡಿಗೆ ರೂ. 175 ಕ್ಕಿಂಥಾ ಹೆಚ್ಚಿಗೆ ಇದೆ. ಗಾಡಿ ಬಾಡಿಗೆ ರೂ. 20 ಹಾಕಿದರೂ ನಿವ್ವಳವಾಗಿ ಗಾಡಿಗೆ ರೂ. 150 ಕ್ಕಿಂಥಾ ಹೆಚ್ಚಿಗೆ ಆಗುವದು. ಈ ರೀತಿಯ ಹೆಚ್ಚಿನ ಬೆಲೆಯಿದ್ದರೂ, ಮದ್ರಾಸು ಪ್ರಾಂತದ್ದ ಬತ್ತ ಬೆಳೆಯುವ ಪ್ರಾಂತಗಳು ಈ ಬೆಲೆಯನ್ನು ಇ

(4ನೇ ಪುಟ ನೋಡಿ)

ಕೊ ಡ ಗು

ತಾ. 3-11-1944ಳಿಗ್ಗೆ ಶುಕ್ರವಾರ

ಪಂಡಿತ ನೆಹರು.

'ಹಿಂದೂದೇಶದ ಸಾವಿರಾರು ರಾಜಕೀಯ ಕೈದಿಗಳ ಪೈಕಿ ಸ್ವಾತಂತ್ರ್ಯದ ಹಳೇ ಸ್ನೇಹಿತರಾಗಿ, ಫೇಜಿತತ್ವದ ಕಡು ವಿರೋಧಿಯಾಗಿ ಒಬ್ಬ ವ್ಯಕ್ತಿಯಿದ್ದಾರೆ. ಅವರನ್ನು ದ್ರೋಹಿಗಳೆಂದು ಜೈಲಿನಲ್ಲಿಡುವದಾದರೆ 'ಸ್ವಾತಂತ್ರ್ಯ' ಎಂಬ ಶಬ್ದಕ್ಕೆ ಅರ್ಥವಿಲ್ಲ. ಪೈಶರಾಯರ ಒಂದರ ಮೇಲೊಂದರಂತೆ ಬರುವ ಶಾಶನಗಳು, ವಾರ್ತೆಗಳ ಮೇಲೆ ನಡೆಯುವ ಕತ್ತರಿ ಪ್ರಯೋಗಗಳು, ಕಾಮನ್ಸ್ ಸಭೆಯ ಪ್ರತ್ಯುತ್ತರಗಳು, ಇವು ಯಾವುವೂ ಆ ವ್ಯಕ್ತಿಯು ಸ್ವಾತಂತ್ರ್ಯದ ವಿರೋಧಿಯೆಂಬುದನ್ನು ನನ್ನು ಮನಸ್ಸಿನಲ್ಲಿ ಮೂಡಿಸಲಾರವು.' ಇದು ಮೈಕೇಲ್‌ಫೂಟ್ ಎಂಬ ಆಂಗ್ಲೇಯರು ಭಾರತದ ಭಾಗ್ಯರವಿ ಪಂಡಿತ ಜವಾಹರರನ್ನು ಕುರಿತು ಆಡಿದ ನುತ. ವಾಸ್ತವವಾಗಿ ಪಂಡಿತ ಜವಾಹರರು ಹಿಂದೂದೇಶವ ಸ್ವಾತಂತ್ರ್ಯ ಸೌಧವನ್ನು ರಚಿಸುತ್ತಿರುವ ಉದ್ದಾಮ ಶಿಲ್ಪಿಗಳು. ಹಿಂದೂದೇಶದ ನೂತ್ರವಲ್ಲ, ಇಡೀ ಜಗತ್ತಿನ ಸ್ವಾತಂತ್ರ್ಯದ ರೂಪರೇಖೆಯನ್ನು ಚಿತ್ರಿಸಿದ ಅದ್ವಿತೀಯರು. ಅಂಥಾ ಮಹಾವ್ಯಕ್ತಿ ಇಂದು ಜೈಲಿನಲ್ಲಿ ಕೊಳೆಯಬೇಕಾಗಿದೆ. ಸಹಸ್ರಸದಳವಾದ ಕಡುಕಾರ್ಪಣ್ಯ, ಅಪಮಾನಗಳನ್ನು ಅವರ ಮೇಲೆ ಸರಕಾರವು ಹೊರಿಸುತ್ತಿದ್ದರೂ ಅಜೇಯರಾಗಿ ಸ್ಥಿತಪ್ರಜ್ಞರಂತೆ ಜೈಲುವಾಸವನ್ನು ಕಳೆಯುತ್ತಿದ್ದಾರೆ.

ನೆಹರೂರವರ ಅವಶ್ಯಕತೆ ಇಂದು ಭಾರತಖಂಡಕ್ಕೆ ಅತಿಯಾಗಿ ಇದೆ. ಇಂದು ಜರ್ಮನಿ, ಜಪಾನುಗಳ ಮೇಲೆ ಕತ್ತಿಕಟ್ಟಿರುವ ಚರ್ಚಿಲ್ ಸರಕಾರವು ಹಿಟ್ಲರನನ್ನು ಹೊಗಳಿ ಬೆನ್ನುತಟ್ಟುತ್ತಿದ್ದಾಗ, ಜಪಾನರ ಪರವಾಗಿ ಚೈನೀಯರ ಜೀವನಾಧಾರವಾದ ಬರ್ಮಾ ರಸ್ತೆಯನ್ನು ಮುಚ್ಚಿದ್ದಾಗ ನಾಜಿ—ಫೇಜಿತತ್ವಗಳ ಖಂಡನೆ ಮಾಡಿ, ಜಪಾನರ ನೀತಿಯನ್ನು ಖಂಡಿಸಿದ ಮಹಾವ್ಯಕ್ತಿ ಇಂದು ಅದೇ ಶತ್ರುಗಳ ಮೇಲೆ ಯುದ್ಧ ನಡೆಯುತ್ತಿರುವಾಗ ಬ್ರಿಟಿಷ್ ಸೆರೆಮನೆಯಲ್ಲಿ ಈ ಕಳೆದ ಎರಡು ವರ್ಷಗಳಿಂದ ಕೊಳೆಯುತ್ತಿರುವದು ಹಿಂದೂದೇಶದ ಹೀನದೆಸೆ; ಇಡೀ ಜಗತ್ತಿನ ದೌರ್ಭಾಗ್ಯ. ಬ್ರಿಟಿಷ್ ಸರಕಾರವು, ಮಿತ್ರಪಕ್ಷದವರು ಈ ಯುದ್ಧವನ್ನು ಸ್ವಾತಂತ್ರ್ಯಕ್ಕಾಗಿ, ಪ್ರಜಾಪ್ರಭುತ್ವರಕ್ಷಣೆಗಾಗಿ ಮಾಡುತ್ತಿರುವೆವೆಂಬ ಶಂಖವನ್ನು ಎಷ್ಟೇ ಬಲವಾಗಿ ಊದಿಕೊಳ್ಳಬಹುದು. ಆ ನರರು ಸೆರೆಮನೆಯಲ್ಲಿರುವರೋ, ಎಂದಿನವರೆಗೆ ಅವರ ನಿಷ್ಕಳಂಕ ಫೇಜೀ ವಿರೋಧವಾಣಿಯು ಜಗತ್ತಿನ ದಿಗಂತದಲ್ಲಿ ಮೊರೆಯುವದಿಲ್ಲವೋ ಅಂದಿನ ವರೆಗೆ ನೆಹರುಗಳ ಬಂಧನದಿಂದ ಸರಕಾರವು ಮಾಡುತ್ತಿರುವದು ಸ್ವಾತಂತ್ರ್ಯದ ಕೊಲೆ. ಪ್ರಜಾಪ್ರಭುತ್ವದ ಸಮಾಧಿ. ಯಾಕೆಂದರೆ ಪಂಡಿತ ಜವಾಹರರು ಇಂದು ಭಾರತದ ಅದ್ವಿತೀಯ ನಾಯಕರು ಮಾತ್ರವಲ್ಲ. ಜಗತ್ತಿನ ಸ್ವಾತಂತ್ರ್ಯದ, ಪ್ರಜಾಪ್ರಭುತ್ವದ ಮೂರ್ತಿ ಸ್ವರೂಪರು.

ನೆಹರೂಗಳು ಬಂಧನದಲ್ಲಿ ತನ್ನ ಆರೋಗ್ಯವನ್ನು ಕಳಕೊಂಡಿದ್ದಾರೆ. ಭಾರದಲ್ಲಿ 16 ಪೌಂಡುಗಳನ್ನು ಕಳಕೊಂಡಿದ್ದಾರೆ. ಪಾರ್ಥಿವ ಶರೀರದಲ್ಲಿ ಈ ರೀತಿಯ ಶಕ್ತಿ ಕ್ಷಯವಾಗಿದ್ದರೂ ಅವರ ಆತ್ಮತೇಜಸ್ಸು, ಅವರ ನೈತಿಕ ಬಲ ಜೈಲಿನೊಳಗಿಂದ ಬೆಳಗುತ್ತಿದೆ. ಈ ಪ್ರಜ್ವಲಮಾನವಾದ ದಿವ್ಯ ಪ್ರಭೆಯನ್ನು ಯಾವ ಸರಕಾರವೂ ಬಂಧಿಸಿಡಲಾರದು. ಬ್ರಿಟಿಷರ ಜೈಲುವಾಸದಿಂದ ನೆಹರುಗಳು ಭೌತಿಕವಾದ ತನ್ನ ಶಕ್ತಿಯನ್ನು ಕಳಕೊಂಡಿದ್ದರೂ, ನೆಹರೂಗಳನ್ನು ಬಂಧಿಸಿದ್ದರಿಂದ ಬ್ರಿಟಿಷ್ ಸರಕಾರವು ತನ್ನ ಪ್ರತಿಷ್ಠೆ, ತನ್ನ ಗೌರವಗಳನ್ನು ಕಳೆದುಕೊಂಡಿದೆ; ಪ್ರಜಾಪ್ರಭುತ್ವದ ಪುರೋಹಿತನೆನಿಸಿದ್ದ ರಾಷ್ಟ್ರವು ಜಗತ್ತಿನ ದೃಷ್ಟಿಯಲ್ಲಿ ತನ್ನ ಉಚ್ಚಸ್ಥಾನವನ್ನು ಕಳೆದುಕೊಂಡು ಕುರೂಪಗೊಂಡಿದೆ. ನೆಹರುಗಳನ್ನು ಬಿಡಬೇಕಾದುದು, ಭಾರತಕ್ಕೆ ಮಾತ್ರವಲ್ಲ; ಇಡೀ ಜಗತ್ತಿನ ಹಿತಕ್ಕಾಗಿ ಅವಶ್ಯವಿದೆ. ಎನ್ನೆಸ್ ಸ್ಟೆಡ್ಲೆಯವರು ಹೇಳಿದಂತೆ, 'ನೆಹರೂಗಳನ್ನು ಬಿಡುವದು ನಮ್ಮ ಒಂದು ಯುದ್ಧ ಘೋಷಣೆಯಾಗಬೇಕು. ಅವರ ವಾಣಿಯು ಸಂಯುಕ್ತ ರಾಷ್ಟ್ರಗಳ ಸಭೆಯಲ್ಲಿ ಕೇಳಬರುವಂತೆ ಮಾಡುವದು ನಮ್ಮ ಧ್ಯೇಯವಾಗಬೇಕು. ಇದಿಲ್ಲದಿದ್ದರೆ ಪೂರ್ವ ಮತ್ತು ಪಶ್ಚಿಮದ ಲೆಕ್ಕವಿಲ್ಲದ ಜನತೆಯು ಈ ಯುದ್ಧವೂ ಕೂಡ ಹಿಂದಿನ ಯುದ್ಧಗಳಂತೆಯೇ, ಮುಂದಿನ ಯುದ್ಧದ ಬೀಜವೆಂದು ತಿಳಿಯಬೇಕಾಗುವದು.'

ಒಳದೇಶ.

ಕೊಡಗಿನಲ್ಲಿ ಸೆಪ್ಟೆಂಬರ್ ತಿಂಗಳಲ್ಲಿ 227 ಜನನಗಳೂ, 266 ಮರಣಗಳೂ ಸಂಭವಿಸಿವೆ.

ಶ್ರೀ. ಕುಂಬೆರ ಕೆ. ಉತ್ತಪ್ಪನವರನ್ನು ಸೆಂಟ್ರಲ್ ಎಕ್ಸೈಯಿಸಿನ ಸಬ್ ಇನ್ಸ್‌ಪೆಕ್ಟರಾಗಿ ಕುಂದಾಪುರ ಸರ್ಕಲಿಗೆ ನೇಮಿಸಿರುವರು.

ಮಡಿಕೇರಿಯಲ್ಲಿ ಪ್ಲೇಗಿನ ರೋಗವು ಕಡಿಮೆಯಾಗಿದ್ದರೂ ಸಿಡುಬು ತಲೆಯೆತ್ತುತ್ತಿದೆ. ಈ ವಾರ ಒಬ್ಬರಿಗೆ ಹೊಸದಾಗಿ ಆಗಿದೆಯೆಂದು ತಿಳಿಯ

ವೀರಾಜಪೇಟೆ ಸರ್ಕಲಿನ ಆಹಾರ ನಿಯಂತ್ರಣ ಇನ್ಸ್‌ಪೆಕ್ಟರಾದ ಶ್ರೀ. ಕಾಳಮಾಡ ಚಿಟ್ಟಪ್ಪನವರು 1½ ತಿಂಗಳ ರಜೆಯಲ್ಲಿರುವದರಿಂದ ಅವರ ಬದಲಿಗೆ ಶ್ರೀ ಪಟ್ಟಡ ನಂಜಪ್ಪನವರನ್ನು ಮಡಿಕೇರಿಯಿಂದ ವರ್ಗಾಯಿಸಿ ಅವರ ಬದಲಿಗೆ ಮಡಿಕೇರಿಗೆ ಶ್ರೀ. ಪೈಕೆರ ಈರಪ್ಪನವರನ್ನು ನೇಮಿಸಿರುವರು.

ಎಕ್ಸೈಸ್ ಇನ್ಸ್‌ಪೆಕ್ಟರ್ ಹುದ್ದೆಯನ್ನು ವಜಾಮಾಡಿ ಶ್ರೀ ಮನೆಯಪಂಡ ತಿಮ್ಮಯ್ಯನವರನ್ನು ಅ. ಕಮಿಷನರ ಪರ್ಸನಲ್ ಅಸಿಸ್ಟೆಂಟರಾಗಿ ತಾ. 1-11-44 ರಿಂದ ನೇಮಿಸಲಾಗಿದೆ.

ರಜೆಯಲ್ಲಿದ್ದ ಶ್ರೀ ಚಿಯಪಂಡ ತಿಮ್ಮಯ್ಯನವರು ತಮ್ಮ ಕೆಲಸದ ಚಾರ್ಜು ವಹಿಸಿಕೊಂಡಿರುವದರಿಂದ ಅವರ ಬದಲಿದ್ದ ಶ್ರೀ ಮಂಡೇಪಂಡ ತಿಮ್ಮಯ್ಯನವರನ್ನು ಸೋಮವಾರಪೇಟೆಗೆ ಅಬ್ಕಾರಿ ಸಬ್ ಇನ್ಸ್‌ಪೆಕ್ಟರಾಗಿಯೂ ಶ್ರೀ. ಬಿ. ಸಿ. ರುದ್ರಪ್ಪನವರನ್ನು ಜಿಲ್ಲಾ ಜಡ್ಜರ ಆಫೀಸಿಗೂ, ಶ್ರೀ ಚೆನ್ನಿರ ಮಂದಪ್ಪನವರನ್ನು ಚೀಫ್ ಕಮಿಷನರ ಆಫೀಸಿಗೂ ವರ್ಗಾಯಿಸಿರುವರು.

ಕೊಡಗು ಸಹಕಾರ ಸೆಂಟ್ರಲ್ ಬ್ಯಾಂಕಿನ ಮಹಾಸಭೆಯು ತಾ. 23-12-44 ರಲ್ಲೂ, ಅಖಿಲ ಕೊಡಗು ಸಹಕಾರಿ ಸಮ್ಮೇಳನವು ತಾ. 24-12-44 ರಲ್ಲೂ ವೀರಾಜಪೇಟೆ ಹೈಸ್ಕೂಲ್ ಆವರಣದಲ್ಲಿ ನಡೆಯುವದು.

ಅಖಿಲ ಕೊಡಗು ಉಪಾಧ್ಯಾಯರ ಸಮ್ಮೇಳನದ ಸಂಬಂಧ 5-11-44 ರ ಬೆಳಿಗ್ಗೆ 9 ಗಂಟೆಗೆ ವೀರಾಜಪೇಟೆ ಹೈಸ್ಕೂಲಿನಿಂದ ಸಾರ್ವಜನಿಕರಿಗೆ 'ಕ್ರಾಸ್ ಕಂಟ್ರೀ ಸ್' ಮತ್ತು 6-11-44 ರಲ್ಲಿ 11-30 ಗಂಟೆಗೆ ಈಜುವ ಸ್ಪರ್ಧೆಯು ಬೇತರಿಕ್ಷಡುವಿನಲ್ಲೂ ನಡೆಯುವದೆಂದು ತಿಳಿಯಿಸಿದೆ.

ಕೊಡಗು ಫಾರೆಸ್ಟ್ ಇಲಾಖಾ ಅಧಿಕಾರಿಗಳಾದ ಶ್ರೀ ಚೆನ್ನಿರ ಕುಶಾಲಪ್ಪನವರು ತಾ. 2-10-44 ರಿಂದ 3 ತಿಂಗಳ ರಜೆಯಲ್ಲಿರುವದರಿಂದ ಅವರ ಬದಲು ಕೆಲಸವನ್ನು ಸ. ಡಿವಿಜನಲ್ ಆಫೀಸರಾದ ರಾ. ಸ. ಕೋದಾಂಡ ಭಂಗಪ್ಪನವರು ನೋಡುತ್ತಿರುವರು.

ಕೊಡಗು ಕಸ್ತೂರ್ ಬಾ ನಿಧಿಗೆ ಸಂಗ್ರಹವಾದ ಹಣದಿಂದ ಕೊಡಗಿಗೆ ದೊರೆಯುವ ಭಾಗವನ್ನು ಯೋಗ್ಯರೀತಿ ಖರ್ಚು ಮಾಡಲು ಶ್ರೀಗಳಾದ ಬಿದ್ದಿಸಿದ್ದಣ್ಣ (ಪ್ರೆಸಿಡೆಂಟ್), ಜಿ. ಯಂ. ಮಂಜುನಾಥಯ್ಯ (ವೈಸ್ ಪ್ರೆಸಿಡೆಂಟ್) ಪಿ. ಐ. ಬೆಳ್ಯಪ್ಪ (ಸೆಕ್ರೆಟರಿ), ಸಿ. ಎಂ. ಪೂಣಚ್ಚ, ಕೆ. ಮಲ್ಲಪ್ಪ, ಕೆ. ಪಿ. ಅಪ್ಪಯ್ಯ, ಸಿ. ಎಂ. ರಾಮ್ಮರಾವ್, ಕೆ. ಎಂ. ಕುಶಾಲಪ್ಪನವರಿಂದ ಕೂಡಿದ ಒಂದು ಸಮಿತಿಯನ್ನು ನೇಮಿಸಲಾಗಿದೆ. ಸಮಿತಿಯ ಸದಸ್ಯರ ಸಂಖ್ಯೆಯು ಹತ್ತು ಎಂದು ನಿಶ್ಚಯಿಸಿ ಉಳಿದ ಎರಡು ಸ್ಥಳಗಳಿಗೆ ಮಹಿಳೆಯರನ್ನು ನೇಮಿಸಲು ಖಾಲಿಬಿಡಲಾಗಿದೆ. ಶ್ರೀ ಬಿ. ಡಿ. ಗಣಪತಿಯವರು ಸಹಾಯಕ ಸೆಕ್ರೆಟರಿಯಾಗಿ ಆರಿಸಲ್ಪಟ್ಟಿರುವರು.

ಶ್ರೀ. ಚೆಂದಂಡ ಟಿ. ಬೋಪಯ್ಯನವರು ಕಳೆದ ಬಿ. ಎಸ್‌ಸಿ. ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವರು.

ವೀರಾಜಪೇಟೆಯಲ್ಲಿ ಕಟ್ಟಿರಿ ವ್ಯಾಪಾರಸ್ಥರಾದ ಶ್ರೀ. ಹೆಚ್. ಅಬ್ದುಲ್‌ರಹೀಂರು ಸೇಫ್ಟಿರೇಜರ್ ಬ್ಲೇಡುಗಳನ್ನು ಇಟ್ಟುಕೊಂಡು, ಗಿರಾಕಿಗಳಿಗೆ ಇಲ್ಲವೆಂದು ಹೇಳಿ ಕಳುಹಿಸಿದ್ದಕ್ಕೆ ಜಿಲ್ಲಾ ಮೇಜಿಸ್ಟ್ರೇಟರು ರಹೀಂರವರಿಗೆ ಒಂದುನೂರು ರೂಪಾಯಿ ಜುಲ್ಮಾನೆ ವಿಧಿಸಿರುವುದಾಗಿ ತಿಳಿಯಬರುತ್ತದೆ.

ಪೊಳ್ಳಿಬೆಟ್ಟದ ದಕ್ಷಿಣ ಕೊಡಗು ಎತಲಿಟಿಕ್ ಯೂನಿಯನ್ನನ್ನು ಈಗ್ಗೆ ಸ್ವಲ್ಪ ಕಾಲ ಹಿಂದೆ ಸ್ಥಾಪನೆ ಮಾಡಿ, ಈ ತಾ. 5ನೇ ಆದಿತ್ಯವಾರ ಹಾಕಿ ಪಂದ್ಯಾವಳಿಯೂ ಮತ್ತು ತಾ. 12 ನೇ ಆದಿತ್ಯವಾರ ಅಪರಾಹ್ನ 1 ಗಂಟೆಯಿಂದ 5 ಗಂಟೆಯ ವರೆಗೆ ಅವರ ವಾರ್ಷಿಕ ಆಟೋಟ ಸ್ಪರ್ಧೆಯೂ ನಡೆಯುವುದು.

ಬೇಕಾಗಿದ್ದಾರೆ.

ಹಿಂದೀ ಮತ್ತು ಕನ್ನಡಬಲ್ಲ ಉಪಾಧ್ಯಾಯರೊಬ್ಬರು ಬೇಕು. ಸ್ಕೂಲುವಿಕೆಯಲ್ಲಿ ನೇರಿತವಾಗಿರಬೇಕು. ಅಪತ್ರವ್ಯವಹಾರ ಕನ್ನಡದಲ್ಲಿದ್ದು ಈ ಕೆಳಗಿನ ಪತ್ತೆಗೆ ಬರೆಯಿರಿ.

ಎಂ. ಸಿ ಭೀಮಯ್ಯ,
'ನೆಹರೂ ಕುಟೀರ'
ಮುಲ್ಲೂರು, ಪೊನ್ನಂಪೇಟೆ.

"ಟ್ರಾ ಪಿ ಕ ಲ್"

ಪಂ. ಮೋತಿಲಾಲ್ ನೆಹರೂ, ಹಕೀಮ್ ಅಜಮಲ್‌ಖಾನ್,
ಡಾ. ಯಂ. ಎ. ಅನ್ಸಾರಿ, ಸುಭಾಶ ಚಂದ್ರ ಬೋಸ್
ಮೊದಲಾದ ರಾಷ್ಟ್ರೀಯ ಧುರೀಣರಿಂದ ಸ್ಥಾಪಿಸಿ,
ಬೆಳೆಸಲ್ಪಟ್ಟ ರಾಷ್ಟ್ರೀಯ ವಿಮಾ ಸಂಸ್ಥೆ.

ಜೀವನ ಸಂಧ್ಯಾ ಕಾಲದಲ್ಲಿ ಜೀವನಿಮೆಯೇ ನಿಮ್ಮನ್ನು ರಕ್ಷಿಸುವದು. ಆದ್ದರಿಂದ ಹಿಂದೂ ದೇಶದ ರಾಷ್ಟ್ರೀಯ ಸಂಸ್ಥೆಗಳಲ್ಲಿ ಹಿರಿದಾದ ಟ್ರಾಪಿಕಲಿನಲ್ಲಿ ವಿಮೆ ಮಾಡಿರಿ.

ಮುಖ್ಯ ಖಜೇರಿ: ಹೊಸದಿಲ್ಲಿ] [ಹೆಚ್ಚಿನ ಮಾಹಿತಿಗೆ ಈ ಪತ್ತೆಗೆ ಬರೆಯಿರಿ:

ಯಂ. ಯು. ಅಚ್ಚಣ್ಣ, ಯಂ. ರಂಗನಾಥಶೆಟ್ಟಿ,
41) ಮಡಿಕೇರಿ. OR ಬ್ರಾಂಚ್ ಮೇನೇಜರ್, ಮಂಗಳೂರು.

ರಣಭೇರಿ.

ಯೂರೋಪಿನ ಯುದ್ಧ ದಿನದಿನಕ್ಕೆ ಬಿರುಸಾಗುತ್ತದೆ. ಸನ್ನೀಹವು ದಿನದಿನ ಭಯಂಕರವಾಗುತ್ತದೆ. ಯುರೋಪು ಅಗ್ನಿಕುಂಡದಂತೆ ಪ್ರಜ್ವಲಿಸುತ್ತಿದೆ. ಭಯಂಕರವಾದ ಹೊಸ ಹೊಸ ಆಸ್ತ್ರಗಳು ಈ ನರಯಜ್ಞದ ಭೀಕರಸ್ಥಿತಿಯನ್ನು ಹೆಚ್ಚಿಸುತ್ತಿವೆ. ಪಶ್ಚಿಮ ಯೂರೋಪು, ಫ್ರೆಂಚ್ ಫ್ಲಾಂಡರ್ಸ್, ಬಾಲ್ಕನ್ ರಂಗ, ಎಲ್ಲಿ ನೋಡಿದರೂ ಖಡ್ಗಾಖಡ್ಗಿ ಯುದ್ಧವೆ. ಜರ್ಮನರ ಪ್ರಭುತ್ವ ಬಹು ಉಗ್ರವಾಗಿದೆ. ಮಾತೃಭೂಮಿಯ ರಕ್ಷಣೆಗಡಿಯಲ್ಲಿ ನಿಂತು ಸರ್ವಶಕ್ತಿ ಶೌರ್ಯದಿಂದ ಹೋರಾಡುತ್ತಿದ್ದಾರೆ. ಪರಿಣಾಮವಾಗಿ ಮಿತ್ರರ ಮುನ್ನಡೆ ಕುಂಠಿತವಾಗಿದೆ. ಎಚಿನ್ ವಶವಾದ ನಂತರ ಪ್ರಾಮುಖ್ಯ ಭಾಗಗಳು ಮಿತ್ರರ ವಶವಾಗುವದಿಲ್ಲ. ಪಶ್ಚಿಮ ಹಾಲೆಂಡಿನ ಕಡೆಯಿಂದ ಮಿತ್ರರ ಸೇನಾಪತಿ ಮಾಂಟೆಗೊಮರಿಯವರು, ಇನ್ನು ಸ್ವಲ್ಪ ದಕ್ಷಿಣದಲ್ಲಿ ಈಕೆನ್‌ಹೋವರರು, ಪೂರ್ವಪ್ರಶ್ಯಾದಲ್ಲಿ ರಷ್ಯನರು, ಮುನ್ನಿತ್ತಿಹೋರಾಡುತ್ತಿದ್ದರೂ ಜರ್ಮನಿಯು ಧೃತಿಗೆಡದೆ ನಷ್ಟ, ಕಷ್ಟ ಸಹಿಸಿದರೂ ವೀರ ಅಭಿಮನ್ಯುವಿನಂತೆ ಕಾದುತ್ತಿದೆ. ಯುದ್ಧವು ಕೆಲವು ದಿನಗಳಲ್ಲಿ ಮುಗಿಯಬಹುದು; ಚಳಿಗಾಲ ಬರುವದರೊಳಗೆ ಜರ್ಮನರನ್ನು ಮೂಲೆಸೇರಿಸಬೇಕೆಂದು ಮಿತ್ರರು ಸಾಹಸಪಟ್ಟರು. ಆದರೆ ಚಳಿಗಾಲವೇನೋ ಬಂದೇಬಿಟ್ಟಿತು. ಆ ಜರ್ಮನರು ಮೂಲೆ ಸೇರಲಿಲ್ಲ. ಬದಲು ಉಗ್ರಸ್ವರೂಪಕ್ಕೆ ತೊಡಗಿದ್ದಾರೆ. 'ಜರ್ಮನಿಯು ಸೋಲಲಿಲ್ಲ ಮತ್ತು ಯೂರೋಪಿನ ಎಲ್ಲ ಕಾಳಗಗಳ ಏಕೀಕರಣತೆಯನ್ನು ಸಾರುವ ಹೋರಾಟ ಮುಂದಿದೆ' ಎಂದು ಕಳೆದ ವಾರ ಹೇಳಿದ ಡೇವಿಡ್ ಫ್ರೇಸರ್‌ನರ ಮಾತು ಸತ್ಯವಾಗಿದೆ. ಕಳೆದ ವಾರ ಆಚೆವಾರ ಇನ್ನೇನು ವಿಜಯವು ಮಿತ್ರರಿಗೆ ದೊರೆತಂತೆ ಎಂದು ಹೇಳುವಂತೆ ಪರಿಸ್ಥಿತಿಯಿತ್ತು. ಆದರೆ ಶರತ್ಕಾಲದ ಮಳೆ, ರಕ್ತವನ್ನು ಹೆಪ್ಪುಗಟ್ಟಿಸುವ ಚಳಿ ಇದರಿಂದಾಗಿ ಸನಿಹವಪಿದ್ದ ವಿಜಯವು ದೂರ ಸರಿದಂತೆ ಕಂಡುಬರುತ್ತದೆ. ಜರ್ಮನರಿಗೆ ತಮ್ಮ ಕೋಟೆಯನ್ನು ಭದ್ರಪಡಿಸಲು ಈ ಚಳಿಗಾಲದಿಂದ ಸಮಯ ಸಾಕಷ್ಟು ದೊರೆತಿದೆ. ಈ ಚಳಿಗಾಲದಲ್ಲಿ ಇನ್ನಷ್ಟು ಸಮಯ ಅವರಿಗೆ ದೊರೆಯುವದು. ಆದ್ದರಿಂದ ಸರ್ವಪ್ರಯತ್ನ ಮಾಡಿ ವಿಜಯಶ್ರೀಪಾದಕ್ಕೆ ಸುತ್ತೊಂದು ಪ್ರಚಂಡ ಪ್ರಯತ್ನವನ್ನು ಅವರು ಮಾಡಿದರೂ ಮಾಡಬಹುದು. ಜರ್ಮನಿಯು ಕೆಲವು ರೀತಿಯ ಗುಪ್ತಾಸ್ತ್ರಗಳನ್ನು ಕಂಡುಹಿಡಿದು, ಆವುಗಳನ್ನು ವರಿಪೂರ್ಣತೆಗೆ ಮುಟ್ಟಿಸಿ ಬಾಂಬುಗಳಿಗೆ ಆಚೆಗ್ಯವಾಗಿರುವ ಭೂಗರ್ಭದಲ್ಲಿನ ತಮ್ಮ ಕಾರಖಾನೆಗಳಲ್ಲಿ ವಿಶೇಷ ಸಂಖ್ಯೆಯಿಂದ ರಚಿಸುತ್ತಿರುವರಂತೆ. ಚಳಿಗಾಲ ಕಳೆದ ಮೇಲೆ ಈ ಗುಪ್ತಾಸ್ತ್ರಗಳನ್ನು ಮೇಲಿಂದ ಮೇಲೆ ಆತನು ಪ್ರಯೋಗಿಸಿ ವಿಜಯಪಡೆಯುವ ಯತ್ನಮಾಡಬಹುದು. ಆದ್ದರಿಂದ ಯುದ್ಧವು ಬೇಗ ನಿಲ್ಲುವ ಚಿಹ್ನೆ ದೂರದೂರ ಹೋಗುತ್ತಿದೆ. ಕೊನೆಯ ಜಯವು ಮಿತ್ರರಿಗೆ ದೊರೆತರೂ ದೊರೆಯಬಹುದು. ಆದರೆ 'ಜಯಸಂಪಾದಿಸಿ ಶಾಶ್ವಿತ ಶಾಂತಿಸ್ಥಾಪಿಸುವೆವು' ಎಂದು ಹೇಳುವ ಅವರ ಮಾತು ಮಾತ್ರ ಹುರುಳಿಲ್ಲದ್ದು. ಜಗತ್ತಿನಲ್ಲಿ ಶಾಶ್ವತವಾದುದು ಯಾವದೂ ಇಲ್ಲ. ಸೋತ ರಾಷ್ಟ್ರ ತನ್ನ ಹಿಂದಿನ ವೈಭವವನ್ನು ನೆನೆದು ಅದರ ಪ್ರಾಪ್ತಿಗಾಗಿ ಪ್ರತೀಕಾರ ಮಾಡದಿರದು. ಪರಮಾತ್ಮನ ಸೃಷ್ಟಿಯಲ್ಲಿ ಅಸಂಖ್ಯಾತ ಜೀವಜಂತುಗಳಿವೆ. ಆದರೆ ಇವುಗಳೆಲ್ಲವುಗಳಿಗೂ ಯುದ್ಧದ ಪ್ರೀತಿಯಿಲ್ಲ. ಕೇವಲ ಮನುಷ್ಯ ಮತ್ತು 'ಇಲಿಗ್ಲಿಯ ಇರುವೆ' ಇವು ಮಾತ್ರ ಯುದ್ಧಾಸಕ್ತವಾದ ಪ್ರಾಣಿಗಳು. ಮನುಷ್ಯನಂತೆ ಇರುವೆಗಳ ಯುದ್ಧ ಬಹುಕಾಲ ಬೆಳೆಯಲಾರದು. ವಿಜ್ಞಾನ ಶಾಸ್ತ್ರಜ್ಞರು ಕಂಡುಹಿಡಿದಿರುವಂತೆ ಅವು 45 ದಿನಗಳ ವರೆಗೆ ಯುದ್ಧ ಮಾಡಿದ್ದು ಕಂಡುಬಂದಿದೆ. ಇತರ ಪ್ರಾಣಿಗಳು ಜಗಳ ಪ್ರಸೂಡುವದಿಲ್ಲವೆಂದಲ್ಲ; ಈ ಜಗಳಗಳನ್ನು ಯುದ್ಧವೆಂದು ಗಣಿಸಲು ಶಕ್ಯವಿಲ್ಲ. ಆದ್ದರಿಂದ ಯುದ್ಧನೂಡುವ ಗುಣವು ಇರುವೆ ಮತ್ತು ಮನುಷ್ಯರ ರಕ್ತದಲ್ಲಿ ಮಿಲನವಾಗಿವೆ. ಆದ್ದರಿಂದ ಮನುಷ್ಯನು ಈಗಿರುವಂತೆ ಬದುಕುತ್ತಿರುವ ವರೆಗೆ ಯುದ್ಧವು ತಪ್ಪಿದ್ದಲ್ಲ. ಆದರೆ ಯುದ್ಧವನ್ನು ಆಗದಂತೆ ಬಹು ಸಮಯಗಳ ವರೆಗೆ ತಡೆದು ಹಿಡಿಯುವದು ಸಾಧ್ಯವಿದೆ. ರಾಷ್ಟ್ರರಾಷ್ಟ್ರಗಳಲ್ಲಿ ಅಸಾವಧಾನ ಉಳಿಯದಂತೆ ನೋಡಿಕೊಳ್ಳುವದೇ ಇದಕ್ಕೆ ಉಪಾಯ. ಆದರೆ ಇಂದು ಯುದ್ಧ ಮಾಡುತ್ತಿರುವವರ ಮುಖ್ಯತಃ ನಮಗೆ ಸಂಬಂಧಿಸಿದ ಮಿತ್ರರ ಕಲ್ಪನೆ ಈ ರೀತಿ ಇದೆಯೇ? ಕೈಯಲ್ಲಿ ಚೂರಿಯಿದ್ದರೆ ಕಂಡಕಂಡದ್ದನ್ನು ಕೊಯ್ಯುವ ಪುನಸ್ವಾಗುವಂತೆ ಹೆಚ್ಚು ಬಲವುಳ್ಳವರು ಎಡಬಲದಲ್ಲಿರುವವರನ್ನು ಕಂಡು ಕಾಲೂಕೆದರುವದು ಸ್ವಾಭಾವಿಕ. ಈ ಸ್ವಾರ್ಥವೃತ್ತಿ, ನೀತಿ, ಅಧಿಕಾರ ಹೋಗದ ವಿನಹ ಯೂರಿಗೂ ಸುಖವಿಲ್ಲ. ಇವುಗಳನ್ನು ಕಿತ್ತೊಗೆದರೆ ಶಾಶ್ವತ ಶಾಂತಿಯನ್ನಲ್ಲದಿದ್ದರೂ ಚಿರಕಾಲ ಬಾಳುವ ಶಾಂತಿಯನ್ನು ಸ್ಥಾಪಿಸುವದು ಸಾಧ್ಯವಿದೆ.

ಈ ವಿಚಾರ ಹೋಗಲಿ, ಪೂರ್ವರಣರಂಗವನ್ನು ನೋಡಿದರೆ ಜಪಾನರ ಮೇಲೆ ಮಿತ್ರರ ಆಕ್ರಮಣ ಪ್ರಾರಂಭವಾಗಿದೆ ಎಂದೆನ್ನಬಹುದು. ಶಾಂತಸಾಗರದಲ್ಲಿ ನೌಕಾಯುದ್ಧವೊಂದು ಭೀಕರವಾಗಿ ನಡೆಯಿತು. ಜಪಾನರ ಪಡೆಗು ಸಡೆಯನ್ನು ಪೂರ್ಣ ಸೋಲಿಸಲಾಗಿದೆಯೆಂದು ಮಿತ್ರರು ಹೇಳುತ್ತಿದ್ದಾರೆ. ಈ ಮಾತಿನ ಪ್ರಕಾರ ಜಪಾನರ ಯುದ್ಧಶಕ್ತಿಯನ್ನಲ್ಲಿ ಮುಗಿದು ಹೋಗುವದು ಎನಿಸುತ್ತದೆ. ಆದರೆ 'ಜಪಾನಿಗಳ ಮುಖ್ಯ ಬಲವಿನ್ನೂ ಮುಂದಿದೆ' 'ಜಪಾನಿಗಳನ್ನು ಸಹಜವಾಗಿ ಸೋಲಿಸುವೆನೆಂದು ತಿಳಿದುಕೊಳ್ಳುವವರ ಕಣ್ಣಿನಲ್ಲಿ ಅಂಜನ ಬೀಳುವದು' ಎಂದು ಮುಂತಾಗಿ ಸಮರಕಲಾವಿಶಾರದರು ಹೇಳುತ್ತಿದ್ದಾರೆ. ಆದ್ದರಿಂದ ಜಪಾನಿನ ಪತನ ಹೇಳುವಷ್ಟು ಸುಲಭದರಲ್ಲಿ ಆಗದು. ಮಿತ್ರರು ಲೆಟೆ ದ್ವೀಪಕ್ಕೆ ನುಗ್ಗಿ ಅದರ ಕರಾವಳಿಯ ಸುಮಾರು 40 ಮೈಲು ಉದ್ದದಲ್ಲಿ ಹೋರಾಡುತ್ತಿದ್ದಾರೆ. ಸುತ್ತುಮುತ್ತಲಿನ ಇನ್ನು ಕೆಲವು ದ್ವೀಪಗಳೂ ಇವರ ವಶವಾಗಿವೆ. ಇದರಿಂದ ಜಪಾನು ಗಾಬರಿಗೊಂಡಿಲ್ಲವೆಂದು ಹೇಳಲು ಸಾಧ್ಯವಿಲ್ಲ. ಅವರು ಹಿಂದೂದೇಶದ ಮೇಲೆ ಧಾಳಿ ಮಾಡಿಯೂರೆಂದು ಕಳೆದ ವಾರ ಬರೆದಿದ್ದೆನು. ತಾ. 28ರಲ್ಲಿ ಜಪಾನರು ಚಿತಗಾಂಗಿನ ಹತ್ತಿರವಿರುವ ಕಾಕ್ಸ್‌ಬಝೂರಿನ ಮೇಲೆ ಬಾಂಬುಹಾಕಿದ್ದುನನ್ನ ಹೇಳಿಕೆಯನ್ನು ಸಮರ್ಥಿಸುವಂತಿದೆ. ಈ ಧಾಳಿಯಿಂದ ನಷ್ಟವೇನೂ ಆಗಿಲ್ಲವೆಂದು ವರದಿಯು ತಿಳಿಸುತ್ತದೆ.

ಕಸ್ತೂರ್ ಬಾ ಸ್ಮಾರಕ ನಿಧಿ.

ಕೊಡಗಿನಲ್ಲಿ ಒಟ್ಟಾಗಿ ರೂ. 14,370 ಈ ನಿಧಿಗಾಗಿ ಸಂಗ್ರಹವಾಗಿ ಈ ಪೂರ್ತಿ ಹಣವನ್ನು ಬೊಂಬಾಯಿಯಲ್ಲಿರುವ ಕೇಂದ್ರ ಸಮಿತಿಗೆ ಕಳುಹಿಸಲಾಗಿದೆ. ಈ ನಿಧಿ ಸಂಗ್ರಹ ಕಾರ್ಯಕ್ಕೆ ಕೇಂದ್ರ ಖಜೇರಿಯವರು ರೂ. 100 ಕಳುಹಿಸಿಕೊಟ್ಟಿದ್ದರು. ಆದರ ಖರ್ಚಿನ ತಪಶೀಲು ಈ ರೀತಿ ಇದೆ.

ಸ್ಟಾಂಪು ಖರ್ಚು.	25	12	9
ಕವರು, ಕಾರ್ಡು ವಗೈರೆ	3	12	0
ಚೆಕ್ಕು ಕಮಿಷನು	2	0	0
ಟೆಲಿಗ್ರಾಮ್ ಖರ್ಚು.	10	14	0
ಹರಿಕಥೆಗೆ ಖರ್ಚು	10	8	0
ಕಾರು ಬಾಡಿಗೆ	7	8	0
ಜುಮ್ಲ ಖರ್ಚು	60	6	9

ರೂ. 39-9-3 ಪೈ ಕೈಯಲ್ಲಿ ಶಿಲ್ಕಾಗಿ ಉಳಿದಿದೆ.

ಬಿ. ಡಿ. ಗಣಪತಿ,
ಕಾರ್ಯದರ್ಶಿ,
ಕೊ. ಕ. ಗಾ. ಸ್ಮಾರಕ ನಿಧಿ.

ಮನೆ ಮೂರಾಟಕ್ಕಿದೆ.

ಮಡಿಕೇರಿ ಹೈಸ್ಕೂಲು ರಸ್ತೆ ಕ್ರಿಕೆಟ್ ಮೈದಾನಕ್ಕೆ ಎಟ್ಟಿ ಮಂಗಳೂರು ಹಂಚು ಹಾಕಿದ ಮನೆ, ಪ್ರತ್ಯೇಕ ಅಡಿಗೆ ಮನೆ, ಹೊರಮನೆ, ಸೋಟಾರ್ ಶೆಡ್, ಕಲ್ಲು ಕಟ್ಟಿದ ಬಾವಿ, ಸುಮಾರು 1¾ ಎಕ್ರೆ ಜಾಣೆ ಕಡ್ಲು, 40 ಬಟ್ಟೆ ಹಡ್ಲು ಭೂಮಿ ಇವು ಮಾರಾಟಕ್ಕಿವೆ. ಮನೆ ಕರಗಳನ್ನು ಸಾಕಲಿಕ್ಕೆ ಬಹು ಅನುಕೂಲವಾಗಿದೆ. ಆರೋಗ್ಯಕರ ಆವರಣದಲ್ಲಿದೆ. ಹೆಚ್ಚಿನ ವಿವರಕ್ಕೆ ಈ ಪತ್ತೆಗೆ ಬರೆಯಿರಿ.

'X'
2-2. C/o. ಸಂಪಾದಕರು,
'ಕೊಡಗು' ಮಡಿಕೇರಿ.

ಶ್ರೀ ಶಾರದಾ ಕಾಫಿ ಪುಡಿ.

ಯಾವುದೊಂದು ಮಿಶ್ರಣ ವಿಲ್ಲದೆ ಪ್ರತಿದಿನವೂ ಹುರಿದು ಪುಡಿ ಮಾಡಿದ್ದನ್ನೇ ಕೊಳ್ಳಿರಿ.

ಮಣ ಒಂದರ ರೂ. 1-11-6
ಸೇರು ಒಂದರ ಆ. 0-1-6

ನಿಮ್ಮ ಮನೆಗಳಲ್ಲಿರುವ ಕಾಫಿ ಬೀಜವನ್ನು ಕ್ರಮ ಪ್ರಕಾರವಾಗಿ ಹುರಿದು ಪುಡಿ ಮಾಡಿಸುವುದಕ್ಕೆ ಕೆಳಗಿನ ವಿಳಾಸವನ್ನು ಗಮನಿಸಿರಿ.

SHRI SHARADA COFFEE HOME (WORKS),
5) McDOWELLS BUILDINGS, *MERCARA.*

ಅನುಭವಸ್ಥ ಕೆಲಸಗಾರರಿಂದ ತಯಾರಿಸಿದ ಸುಪ್ರಸಿದ್ಧ ಮಂಗಳೂರು
ಮೋಹನ್ ಬೀಡಿಗಳನ್ನೇ ಸೇದಿ ಆನಂದ ಪಡೆಯಿರಿ.
ಎಲ್ಲಾ ತಂಬಾಕು ಅಂಗಡಿಗಳಲ್ಲಿಯೂ ಮಾರಲ್ಪಡುತ್ತದೆ.
1) ಕೊಡಗಿನ ಪ್ರವರ್ತಕರು:—
ವೀರರಾಜೇಂದ್ರಪೇಟೆಗೆ— ಶ್ರೀ ಯು. ಕೆ. ಮುದ್ದಪ್ಪನವರು
ಮಡಿಕೇರಿಗೆ— ಶ್ರೀ ದುರ್ಗಾ ಸ್ಟೋರ್ಸ್.
ಮೋಹನ್ ಬೀಡಿ ವರ್ಕ್ಸ್, 273, ರೈಲ್ವೆ ಸ್ಟೇಷನ್ ರಸ್ತೆ, ಮಂಗಳೂರು.

ನಂಬಿಕೆಗರ್ಹವಾದ ಸಂಖ್ಯೆಗಳು.
23ನೇ ತ್ರೈವಾರ್ಷಿಕ ಮೌಲ್ಯಗಣನೆ.
ಮೂರು ವರ್ಷಗಳ ಐನ್ ಲಾಭ 1,50,88,092.
ವಿಮಾದಾರರ ಕ್ಷೇಮನಿಧಿ 54 ಲಕ್ಷ ಸೇರಿದೆ.
ಬೋನಸುಗಳು ಹೋಲ್ ಲೈಫ್ 1000ಕ್ಕೆ ವರ್ಷಕ್ಕೆ 12½%
ಎಂಡೋಮೆಂಟ್ .... 1000ಕ್ಕೆ ವರ್ಷಕ್ಕೆ 10½%
'ಓರಿಯಂಟಲ್'
ಗವರ್ನ್‌ಮೆಂಟ್ ಸೆಕ್ಯೂರಿಟಿ ಲೈಫ್ ಅಶ್ಯೂರೆನ್ಸ್ ಕಂಪೆನಿ ಲಿಮಿಟೆಡ
ಸ್ಥಾಪನೆ ಭಾರತದಲ್ಲಿ 1874] [ಮುಖ್ಯ ಖಜೇರಿ—ಬೊಂಬಾಯಿ.
ಶಾಖೆ—'ಓರಿಯಂಟಲ್ ಬಿಲ್ಡಿಂಗ್ಸ್' ಸೌತ್ ಪೇರೇಡ್, ಬೆಂಗಳೂರು.
ಇನ್ಸ್‌ಪೆಕ್ಟರರ ಆಫೀಸು— ಸದಾಶಿವ ರೋಡು, ಮಂಗಳೂರು.

..... Navabharat Book D-pot Udipi South India .....

— ನೋಡಿದರೆ ಬಿಡಬಿರುವ ಕೆಲವು ಪುಸ್ತಕಗಳು —

	ರೂ. ಆ.		ರೂ. ಆ.		ರೂ. ಆ.
ಸುಲಭದಲ್ಲಿ ಇಂಗ್ಲಿಷ್	1.4	ಮೂರು ಪ್ರಹಸನಗಳು	0.14	ವೀರಭೂಮಿ	0.2
ಯುವಕರಿಗೆ ಮತ್ತು ವಯಸ್ಕರಿಗೆ ಸುಲಭವಾಗಿ ಇಂಗ್ಲಿಷನ್ನು ಅನ್ಯ ಸಹಾಯವಿಲ್ಲದೆ ಕಲಿಸುವ ಇಂಗ್ಲಿಷ್ ಸ್ವಯಂಬೋಧಿನಿ	0.8	ಸ್ವತಂತ್ರಜೀವನೋಪಾಯ	0.3	ವತ್ಸಲಾ	0.8
		ಪುರುಷ ವಧು	0.4	**● ಕವಿತೆಗಳು**	
		ಹೆಂಡ್ತಿಗಂಡನಾದರೆ	0.4	ಕಾವ್ಯ ಸಾಮ್ರಾಜ್ಯ	0.12
● ನಾಟಕಗಳು		**● ಕತೆಗಳು**		ಮುಗುಳು	0.3
ಪ್ರೇಮವಿಜಯ	0.12	ನಗೆನೋಟಿಗಳು	0.14	ಶ್ರೀಮುಖ	1.0
ದೇಶಭಕ್ತ	1.4	ಅನ್ನದೇವರು		ಪುರಂದರದಾಸರ ಕೀರ್ತನೆ	1.0
ಸೃಭಿಚಾರಿಣಿ ಯೂರು	0.12	ಮತ್ತು ಇತರ ಕತೆಗಳು	1.0	ಭಗವದ್ಗೀತಾ (ಮೂಲ—ಸಿಲ್ಕ್ ಬೈಂಡು)	1.4
ಕುಶಲವ	0.5	ಭಾರತೀಯ ಕತೆಗಳು	0.14	**● ಇತರ ಪುಸ್ತಕಗಳು**	
ಸಂಶಯ ಪಿಶಾಚಿ	0.8	ನಂದಾದೀಪ	0.10	ಮುಂದಿನ ದೇವರು	0.3
ರಂಗಭೂಮಿ	0.8	ನಾಡಕತೆಗಳು	0.3	ರಾಷ್ಟ್ರಸಭೆಯ ಇತಿಹಾಸ	2.8
ಪ್ರಕಾಶ	1.12	ಕಂಡೂಕಾಣದನೋಟಗಳು	0.8	ಬಾಲವಾಙ್ಮಯ	0.3
ಧರ್ಮ ಸಂಕಟ	0.4	ನಾವೀ ಹೃದಯ	0.14	ಮಿತ ಸಂತತಿ	0.8
ಆರೋಗ್ಯ ಪ್ರತಾಪ	0.12	ಆಂತರಂಗದ ಕತೆಗಳು	0.10	ನಿಶ್ಚಯ ಜ್ಞಾನ	0.8
ಪಂಜಾರತಿ	0.6	ಪ್ರೇಮಪ್ರವಾಹ	0.6	ಪಾಪಪೂರಿತ ಮಕ್ಕಳು	1.3
ಪ್ರತೀಕಾರ	0.6	ಆಪತಿ ಇತ್ಯಾದಿಕತೆಗಳು	0.12	ಚಿಗುರು	0.6
ಸೇವಾಪಥ	0.3	ಲೋಪಾಮುದ್ರೆ	0.6	ಇತರ ಪುಸ್ತಕಗಳ ಕೆಟಲಾಗಿಗೆ 2 ಆಣೆ ಸ್ಟಾಂಪಿಟ್ಟು ಬರೆಯಿರಿ	
		● ಕಾದಂಬರಿಗಳು			
		ಸನ್ಯಾಸಿಯ ಸೋಗಿನಲ್ಲಿ	0.8		

ನವಭಾರತ ಪುಸ್ತಕ ಭಂಡಾರ, ರಿಜಿಸ್ಟರ್ಡ್, ಪಬ್ಲಿಷರ್ಸ್, **ಉಡುಪಿ, ದ. ಕ.**

2 ..... Navabharat Book Depot Udipi, South India 2

The Canara Banking Corporation Limited.

(Incorporated in British India)

ETD— Head Office—UDIPI, (S. K.) —1906

Paid up capital .. .. .. *Rs. 14,38,255*
Reserves .. .. .. *Rs. 4,10,000*
Total working Resources .. .. *Exceed Rs. 1 Crore*

ANNOUNCEMENT.

A Branch of the Bank has been opened at BOMBAY on 24—10—1944. 1st Floor, Ready money Mansions. Churchgate Street, Fort,

3)

ದಿ ಬೋಂಬೆ ಲೈಫ್ ಅಶ್ಯೂರೆನ್ಸ್ ಕಂ. ಲಿಮಿಟೆಡ್.

— ಬೇಕಾಗಿದ್ದಾರೆ —

ಜನಬಳಿಕೆಯಿರುವ ಕಾರ್ಯಚತುರ ಏಜೆಂಟರು ಲಾಭದಾಯಕ ಶರತುಗಳ ಮೇಲೆ ಕೊಡಗಿನ ಉದ್ದಗಲಕ್ಕೂ ಬೇಕಾಗಿದ್ದಾರೆ. ಯೋಗ್ಯತೆ, ವಯಸುಗಳನ್ನು ಸೂಚಿಸಿ ಬರೆಯಿರಿ.

ಕೊಚ್ಚಿಕಾರ್ ಬ್ರದರ್ಸ್, ಲಿ.

ಮದ್ರಾಸ್ ಬ್ರಾಂಚಿನ ಸೆಕ್ರೆಟರಿಗಳು.

ಪಿ. ಬಿ. ನಂ. 337, ಮದ್ರಾಸು.

7)

ಧಾತು ವೃದ್ಧಿ ರಸಾಯನ (ZANDU)

"ರ್ಯಾಕ್ಟೋ—ಫಾಸ್ಫೋ—ಮೂಲ್ಟ್"

ಎಂಬು ಪ್ರಸಿದ್ಧ ಡಾಕ್ಟರುಗಳು ಮುಕ್ತ ಕಂಠದಿಂದ ಹೊಗಳುತ್ತಿದ್ದಾರೆ.

ಈ ರಸಾಯನ } ಕಾಯಿಲೆಯವರಿಗೆ, ಆರೋಗ್ಯದಿಂದಿರುವವರಿಗೆ, ಧಾತು ಕ್ಷೀಣತೆಯುಳ್ಳವರಿಗೆ, ರೋಗ ನಿವೃತ್ತಿಯಾಗಿ ಸುಧಾರಿಸಿಕೊಳ್ಳುವವರಿಗೆ, ಅಶಕ್ತರಿಗೆ ಟಾನಿಕ್.

ವಿದ್ಯಾರ್ಥಿಗಳಿಗೆ, ವಕೀಲರಿಗೆ, ವೈದ್ಯರಿಗೆ, ಡಾಕ್ಟರರಿಗೆ, ಶ್ರಮ ಜೀವಿಗಳಿಗೆ, ರೋಗಿಗಳಿಗೆ, ನಿರೋಗಿಗಳಿಗೆ, ಗೃಹಸ್ಥಾಶ್ರಮಿಗಳಿಗೆ, ಬ್ರಹ್ಮಚಾರಿಗಳಿಗೆ, ಸ್ತ್ರೀಯರಿಗೆ, ಪುರುಷರಿಗೆ—ಎಲ್ಲರಿಗೂ ಬೇಕಾದ ರಸಾಯನವಿದು. ಇದು ಜಠರಾಗ್ನಿಯನ್ನು ಸರಿಪಡಿಸುವುದು. ಮೆದುಳಿಗೆ ತಂಪನ್ನುಂಟುಮಾಡುವುದು, ನಾಲಿಗೆಗೆ ರುಚಿಯಾಗಿರುವುದು. ಇದರಲ್ಲಿ ನವಜೀವನಕರವಾದ ಎಲ್ಲಾ ವಿಟಮಿನ್ನುಗಳು ಕೆಂಪು ರಕ್ತ ಕಣಗಳನ್ನು ಹೆಚ್ಚಿಸುವ ಅಮೂಲ್ಯ ಔಷಧಿಗಳಿವೆ.

ಇದರಲ್ಲಿ ಇಲೆಕ್ಟ್ರಿಕ್ ಫಾಸ್ಫೋವೊಲ್ಟ್, ಹೆಸೋಗ್ಲೋಬಿನ್, ಸೋದಿಗ್ಲಿಸರೊ ಫಾಸ್ಫೇಟ್ ಪೆಪ್ಟನ್, ಸಾಲ್, ಪೂಲ್ಟ್ ಎಕ್ಸ್‌ಟ್ರಾಕ್ಟ್, ದಾಕ್ಷಾಸವ ಮೊದಲಾದ ಪ್ರಸಿದ್ಧ ಔಷಧಿಗಳಂಶವಿದೆ. ಇಂದಿನಿಂದಲೇ ಸೇವಿಸಿ ಅನುಭವ ಪಡೆಯಿರಿ. ಇದು ಎಲ್ಲಾ ಪ್ರಸಿದ್ಧ ಔಷಧ ಶಾಪುಗಳಲ್ಲಿದೆ.

ಝಂಡು ಫಾರ್ಮಸ್ಯುಟಿಕಲ್ ವರ್ಕ್ಸ್ ಲಿಮಿಟೆಡ್,

ಗೋಖಲೆ ರೋಡ್, ಬೋಂಬೆ.

9)

ಎಂಪೈರ್ ಆಫ್ ಇಂಡಿಯಾ

ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

45) ಸ್ಥಾಪನೆ:—೧೮೯೭.

೪೭ನೇ ವಾರ್ಷಿಕ ವರದಿಯಲ್ಲಿನ ಕೆಲವು ಸ್ಪಷ್ಟ ಸಂಗತಿಗಳು.

ಒಟ್ಟು ಆದಾಯ ೯೭,೩೭,೦೦೦ ರೂಪಿ
ಚಾಲ್ತಿಯಿರುವ ವಿಮೆ ೧೬,೪೯,೪೪,೦೦೦ ,,
ಆಸ್ತಿ .... ೬,೩೦,೪೬,೯೦೦ ,,
ಕಂಪೆನಿಯು ಆದಿಯಲ್ಲಿ ಕೊಟ್ಟ ಕ್ಲೈಮುಗಳು ೮,೩೪,೦೦,೦೦೦ ,,

ಆಂಗ ಕಛೇರಿ: ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡ ರಸ್ತೆ, ಬೆಂಗಳೂರು.

ಏಜೆನ್ಸಿ ಆರ್ಜಿಗಳನ್ನು ಸ್ವಾಗತಿಸಿದೆ.

ಪ್ರಧಾನ ಕಛೇರಿ: ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್ ಬೋಂಬೆ

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ.ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ವಸೂಲಾದ ಶೇರ್ ಮೊಬಲಗು ರೂ. 95,060, ಜನೂ ಬಂದ ಠೇವಣಾತಿ 2,24,750 ವಸೂಲಾದ ಕ್ಲೇಮುನಿಧಿ 2,16,209, ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು 2,02,925.

ಈ ಬ್ಯಾಂಕಿನಿಂದ ಸಹಕಾರ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡುವುದಲ್ಲದೆ ಡಿಪಾಜಿಟ್ಟುದಾರರಿಗೆ ಅವರ ಡಿಪಾಜಿಟ್ಟು ಆಧಾರದ ಮೇಲೆ 90% ಕೊಡಲಾಗುತ್ತೆ. ನಿರಖು ಠೇವಣಾತಿಗಳಿಗೆ ಒಂದು ವರ್ಷದಿಂದ ಮೂರು ವರ್ಷಗಳ ವರೆಗೆ ಶೇಕಡ 3. ಮೂರು ವರ್ಷಗಳಿಂದ ಐದು ವರ್ಷಗಳ ವರೆಗೆ 2½. ಐದು ವರ್ಷಗಳಿಂದ ಹತ್ತು ವರ್ಷಗಳ ವರೆಗೆ 3½. ಹತ್ತು ಅದಕ್ಕಿಂತ ಮೇಲ್ಪಟ್ಟವುಗಳಿಗೆ 4½. ಸೇವಿಂಗ್ಸ್ ಬ್ಯಾಂಕ್ (on daily balance) ಡಿಪಾಜಿಟ್ಟುಗೆ ಶೇಕಡ 0—8—0. ವರ್ಷಕ್ಕೊಮ್ಮೆ ರಿಜಿಸ್ಟ್ರಾರರು ಲೆಕ್ಕ ಪರಿಶೋಧನೆ ಮಾಡುತ್ತಾರೆ.

Edited, Printed and Published by P. I. Belliappa at 'Kodagu' Press, Mercara, for 'Kodagu' Ltd.

(1ನೇ ಪುಟದಿಂದ ಸಾಗಿದ್ದು)

ನ್ನೂ ಏರಿಸುವ ಚಳವಳ ಮಾಡುತ್ತಿರುವದು ಪತ್ರಿಕೆಗಳಿಂದ ತಿಳಿಯಬರುತ್ತಿದೆ. ಇದ್ದರಿಂದ ಬತ್ತದ ಬೆಲೆಯನ್ನು ಇಲ್ಲಿಗಾಡಿಗೆ ಕಡಿಮೆ ರೂ. 150 ಕ್ಕಾದರೂ ಏರಿಸುವದು ಧರ್ಮವಾಗಿದೆ. ಕೊಡಗಿನಿಂದ ಹೊರಪ್ರಾಂತಗಳಿಗೆ ಬತ್ತ ರವಾನಿಸುವ ಪಹವಾಟನ ಖರ್ಚಿನ ಪ್ರಭಾವವು ಪ್ರತ್ಯಕ್ಷವಾಗಿ ಬತ್ತದ ಬೆಲೆಯಮೇಲೆ ಬೀಳುತ್ತದೆ. ಕಳೆದ ಸಾಲಿನಲ್ಲಿ ಮೈಲಿಗೆ ರೂ. 1 ರಂತೆ ಲಾರಿಬಾಡಿಗೆ ನಿಶ್ಚಯಿಸಿದ್ದು ಬಹು ಹೆಚ್ಚಾಯಿತು. ಅದನ್ನು ಮೈಲಿಗೆ 0-10-0 ಯೂ 0-12-0 ಗೆ ತರಬೇಕು. ಇದಲ್ಲದೆ ಕೊಡಗಿನ ಹೊರಗೆ ಬತ್ತ ಸಾಗಿಸುವ ಲಾರಿಗಳು ಹಿಂತಿರುಗಿ ಬರುವಾಗ ಅಲ್ಲಿಂದ ನಮಗೆ ಬೇಕಾದ ಸಾಮಾನು ತುರುವಂತೆ ಮಾಡಿದರೆ ಲಾರಿಬಾಡಿಗೆಯು ಬಹುಮಟ್ಟಿಗೆ ಇಳಿಯುವದು. ಕಾಫಿಯನ್ನು ಸಾಗಿಸಲು ಏರ್ಪಡಿಸಿದ್ದಂತೆ, ಕೇವಲ ಪೆಟ್ರೋಲ್ ಮತ್ತು ಬರುವ ಕೆಲಸಗಾರರ ಊಟೋಪಚಾರ ಖರ್ಚುಗಳಿಂದ ಬತ್ತ ಸಾಗಿಸಲು ಮಿಲಿಟರಿಲಾರಿಗಳನ್ನು ಏರ್ಪಡಿಸಿದರೆ ಇನ್ನೂ ಉತ್ತಮವಾಗುವದು.

ಬತ್ತದ ಧಾರಣೆಯನ್ನು ಏರಿಸಬೇಕೆಂದು ವಾದಿಸುವಾಗ, ಕ್ರಯಕ್ಕೆ ಕೊಂಡು ಉಪಯೋಗಿಸುವವರ ದೃಷ್ಟಿಯು ನಮ್ಮ ಮನಸಿನಲ್ಲಿಲ್ಲದೆ ಇಲ್ಲ. ಕಾಫಿ ತೋಟಗಳಲ್ಲಿನಮತ್ತು ಬತ್ತದ ಗದ್ದೆಯ ದಿನಕೂಲಿಗಳೇ ಇವರಲ್ಲಿ ಬಹು ಸಂಖ್ಯಾತರಾಗಿದ್ದಾರೆ. ಬತ್ತದ ಗದ್ದೆಗಳ ಮೂಲೀಕರಲ್ಲಿರುವ ಬಹುತೇಕ ದೇಶೀಯ ಕೂಲಿಗಾರರನ್ನು ಕೆಲಸ ಮಾಡಿಸುವವರೇ ಪೋಷಿಸುತ್ತಾರೆ. ಅಲ್ಲದೆ ಜಿವರಿಗೆ ಧಾನ್ಯವ ರೂಪದಲ್ಲಿಯೇ ಸಂಬಳ ಕೊಡುತ್ತಾರೆ. ಕಾಫಿತೋಟಗಳಲ್ಲಿ ಬಹು ಭಾಗದವರಿಗೆ ಭೂಮಿಯಿದ್ದು ಅವರು ಸಹ ಧಾನ್ಯಗಳ ರೂಪದಲ್ಲಿಯೇ ವೇತನ ಇಲ್ಲವೆ ಈಗ ಹಲವರು ಮಾಡುತ್ತಿರುವಂತೆ ಕಡಿಮೆ ದರದಲ್ಲಿ ಬತ್ತವನ್ನು ಸರಬರಾಯಿಮಾಡಬಹುದು. 1939 ರಿಂದ ಕಾಫಿಗೆ ಉತ್ತಮ ಬೆಲೆಯಿರುವ ಕಾರಣ ಇತರ ಕಾಫಿ ತೋಟದ ಮೂಲಿಕರು ಹೆಚ್ಚಿನ ದರದಲ್ಲಿ ಬತ್ತವನ್ನು ಕೊಂಡುಕೊಂಡು ಅವರ ತೋಟದ ಕೂಲಿಗಳಿಗೆ ಕಡಿಮೆ ದರದಲ್ಲಿ ಸರಬರಾಯಿಮಾಡುವದು ಶಕ್ಯವಿದೆ. ಬತ್ತವನ್ನು ಕ್ರಯಕ್ಕೆ ಕೊಂಡು ಉಪಯೋಗಿಸುವವರಲ್ಲಿ ಉಳಿಕೆಯಾದ ಬಾಕಿ ಜನರ ಹಿತಕ್ಕಾಗಿ ಮೈಸೂರು ಸರಕಾರವು ಅನುಸರಿಸಿರುವ ನೀತಿಯನ್ನು ಕೈಕೊಳ್ಳಬಹುದು. ಉದಾ:—ತಾವು ಕ್ರಯಕ್ಕೆ ಕೊಂಡುಕೊಂಡದುವಕ್ಕಿಂತಲೂ ಕಮ್ಮಿ ತರದಲ್ಲಿ ಮಾರಾಟಮಾಡುವದು. ಕೊಡಗು ಸರಕಾರವು ಹೀಗೆ ಕೊಂಡುಕೊಂಡು ಉಪಯೋಗಿಸುವವರಿಗೆ ಎಷ್ಟು ಆಕ್ಕೆ ಬೇಕಿದೆಯೆಂಬುದನ್ನು ನಿಶ್ಚಯಿಸಿ, ನಿಯಂತ್ರಿಸಿದ ಬೆಲೆಯಲ್ಲಿ ಅದನ್ನು ಕೊಂಡು ಕೊಂಡು ಅವರಿಗೆ ಅದನ್ನು ಕಡಿಮೆ ದರದಲ್ಲಿ ಅಂದರೆ ರೂಪಾಯಿಗೆ ತಲೆಬಡಿದ 5 ಸೇರುಗಳಿಗೆ ಕಡಿಮೆಯಿಲ್ಲದ ದರದಲ್ಲಿ ಸರಬರಾಯಿಮಾಡಬೇಕು. ಇದರಿಂದ ಬರುವ ನಷ್ಟವನ್ನು ಸರಕಾರವು ನಿರ್ವಹಿಸಬೇಕು. ಹೊರಗೆ ಕಳುಹಿಸುವ ಪ್ರತಿ ಗಾಡಿಬತ್ತಕ್ಕೆ ರೂ. 2ರಂತೆ ರಫ್ತು ಕರಹಾಕಿ ಈ ನಷ್ಟವನ್ನು ತುಂಬಿಕೊಳ್ಳಬಹುದೆಂದು ಸೂಚಿಸುತ್ತೇವೆ.

ಮತ್ತೊಂದು ಪ್ರಾಮುಖ್ಯ ವಿಚಾರವೆಂದರೆ ಮಿ. ಪ್ರಿಟ್ ಚಾರ್ಡ್‌ರವರ ಯೋಜನೆಯಲ್ಲಿದ್ದಂತೆ ಪ್ರಾಂತೀಕ ನಿಕ್ಷೇಪವೊಂದನ್ನು ಏರ್ಪಡಿಸುವದರ ಆವಶ್ಯಕತೆಯಿದೆ. ನಮ್ಮ ಪ್ರಾಂತದ ಉಳುಪರಿಯನ್ನು ಬೇರೆ ಪ್ರಾಂತಗಳಿಗೆ ಸಾಗುವ ಮೊದಲು ಮತ್ತೊಂದು ಬೆಳೆ ಬರುವ ವರೆಗಿನ ನಮ್ಮ ದೇಶದ ಬೇಡಿಕೆಗೆ ಯೋಗ್ಯ ಪ್ರಮಾಣಗಳಷ್ಟೇ ಎಂಬುದನ್ನು ಯೋಚಿಸಿ ಯೋಗ್ಯ ಏರ್ಪಾಡು ಮಾಡುವದು ಆವಶ್ಯಕ. ಸಾಕಾಗಳದ ಕರುಣಕತೆಯಲ್ಲಿ ಇಲ್ಲಿ ಎಷ್ಟೇ ಸೂಕ್ಷ್ಮರೂಪದಲ್ಲಾದರೂ ನಡೆಯುವದಂತೆ ನೋಡಿಕೊಳ್ಳಬೇಕು. ಈ ಕಾರ್ಯಕ್ಕೆ ಪ್ರತ್ಯೇಕ ಏರ್ಪಾಡು ಅಗತ್ಯವಿಲ್ಲ. ಗ್ರಾಮದಲ್ಲಿರುವ ಧಾನ್ಯ ಬ್ಯಾಂಕುಗಳನ್ನು, ಬತ್ತ ಮಾರ್ಕಟಿಂಗ್ ಸಂಘಗಳನ್ನು ಇದಕ್ಕೆ ಉಪಯೋಗಿಸಬಹುದು. ಇಂಥಾ ಒಂದು ಎಚ್ಚರಿಕೆಯು ವಿಶೇಷವಾಗಿ ಈ ವರ್ಷ ಆವಶ್ಯಕಯಾಕೆಂದರೆ ಬತ್ತದ ಬೆಳೆಯು ಶೇಕಡ 40 ರಷ್ಟು ಕಡಿಮೆಯಾಗುವದೆಂಬ ಹೆದರಿಕೆಯಿರುವದರಿಂದ.

ಕಡೆಯದಾಗಿ ಈ ಕೆಳಗಿನ ನಿಶ್ಚಿತ ಕೇಳ್ಕೆಗಳನ್ನು ವಮಂದಿಡಬಯಸುತ್ತೇವೆ. (1) ಬೆಳೆಯು ಬತ್ತದ ಬೆಲೆಯನ್ನು 120 ಪರಿಯು ಗಾಡಿಗೆ ರೂ: 150 ಕ್ಕೂ, ಕೊಯಮತ್ತೂರು ಸಣ್ಣದ ಬೆಲೆಯನ್ನು ರೂ. 155ಕ್ಕೂ, ಜೀರಿಗೆ ಸಣ್ಣದ ಬೆಲೆಯನ್ನೂ ರೂ. 185 ಕ್ಕೂ ಏರಿಸಬೇಕು. ಒತ್ತ ಬೆಳೆಸುವವರು ಒಮ್ಮಲೇ ತಮ್ಮ ಬತ್ತವನ್ನು ಮಾರಾಟಮಾಡಲು ತುರ್ತುಪಡದಂತೆ ಈ ಬೆಲೆಯನ್ನು ಪ್ರತಿ ಮೂರು ತಿಂಗಳುಗಳಿಗೆ ರೂ. 3 ರಂತೆ ಏರಿಸಬೇಕು. (2) ನಮ್ಮ ಉಳುವರಿ ಬತ್ತದ ಬಹುಭಾಗವು ಮೈಸೂರಿಗೆ ಕಳುಹಿಸಲ್ಪಡುವದರಿಂದ ಮೈಸೂರು ಸರಕಾರದೊಡನೆ—ನಮ್ಮ ಆವಶ್ಯಕಗಳಾದ ಉಪ್ಪು, ಕುರಿ, ಧಾನ್ಯ, ಗೊಬ್ಬರಗಳು ಯೋಗ್ಯ ದರದಲ್ಲಿ ಮತ್ತು ಪರಿಪೂರ್ಣದಲ್ಲಿ ದೊರೆಯುವಂತೆ—ನಿಶ್ಚಿತ ಏರ್ಪಾಡು ಮಾಡಬೇಕು. (3) ಯೋಗ್ಯ ದರದ ಕೂಲಿಯಲ್ಲಿ ಮತ್ತು ಆಗತ್ಯವಾಗುವಷ್ಟು ಸಂಖ್ಯೆಯಲ್ಲಿ ಮಲಬಾರಿನಿಂದ ಮತ್ತು ದ. ಕನ್ನಡದಿಂದ ಕೆಲಸಗಾರರನ್ನು ಒದಗಿಸಿಕೊಡಲು ಮದ್ರಾಸು ಸರಕಾರದೊಡನೆ ಏರ್ಪಾಡು ಮಾಡಬೇಕು. (4) ಅಕ್ಕಿಯನ್ನು ಕೊಂಡುಕೊಂಡು ಉಪಯೋಗಿಸುವ ಬಡ ಜನರ ಹಿತದೃಷ್ಟಿಯಿಂದ ಸ್ಥಳೀಯ ಪೇಟ್ಟೆಗಳಲ್ಲಿ ರೂಪಾಯಿಗೆ ಐದು ಸೇರಿಗೆ ಕಡಿಮೆ ಇಲ್ಲದೆ ಅಕ್ಕಿ ಮಾರಲ್ಪಡುವ ಏರ್ಪಾಡಾಗಬೇಕು. (5) ಸರಕಾರವು ಪ್ರಾಂತೀಕ ನಿಕ್ಷೇಪವೊಂದನ್ನಿಟ್ಟು ಅಪಾರಿತ್ಯದ ಆವಶ್ಯಕತೆಗಳನ್ನು ಎದುರಿಸುವ ಏರ್ಪಾಡು ಮಾಡಬೇಕು. (6) ಸ್ಥಳೀಯ ಸರಕಾರವು ನಮಗೆ ಸಹಾಯಮಾಡಲು ಶಕ್ಯವಿಲ್ಲವೆಂದು ಕಂಡರೆ ಮೇಲಿನ ಕೇಳಿಕೆಗಳನ್ನು ಒಂದು ನಿಯೋಗ ಗೋಷ್ಠಿ ರೂಪದಲ್ಲಿ ಇಂಡಿಯಾಸರಕಾರದ ವಮಂದಿಡಲು ತಕ್ಕ ಸಹಾಯ ಮಾಡಬೇಕು".

ಚೀಫ್ ಕಮಿಷನರವರು ನಿಯೋಗಗೋಷ್ಠಿಯು ಮುಂದಿರಿಸಿದ ವಿಷಯಗಳನ್ನು ಕೂಲಂಕಶವಾಗಿ ಕೇಳಿ, ಬತ್ತದ ಬೆಲೆಯನ್ನು ಏರಿಸಲು ದೇಶದಲ್ಲಿ ಆಗುತ್ತಿರುವ ಚಳವಳ, ಕೌನ್ಸಿಲಿನಲ್ಲಿ ಬಂದ ಸೂಚನೆ ಮತ್ತು ದೇಶದ ಇನ್ನಿತರ ಕಾರಣಗಳನ್ನು ಸೂಚಿಸಿ ಇಂಡಿಯಾ ಸರಕಾರಕ್ಕೆ ಬರೆದು ಅದು ಸರಕಾರದ ಪರ್ಯಾಲೋಚನೆಯಲ್ಲಿರುವದಾಗಿಯೂ ಜನತೆಗೆ ಹಿತವಾಗುವ ರೀತಿಯ ಏರ್ಪಾಡು ಮಾಡಲು ತಾನು ಪ್ರಯತ್ನಮಾಡುವದಾಗಿಯೂ ಹೇಳಿದರು.

No. 218

ಶ್ರೀ ಡಿ. ಗಣಪತಿಯವರ ಸಂಗ್ರಹ

ಕೊಡಗು : ಕನ್ನಡ ಮಾಸ ಪತ್ರಿಕೆ (ಪ್ರಥಮ ಪ್ರಯತ್ನಾಂಕ) ಒಟ್ಟು ಪತ್ರಿಕೆಗಳು = 43

ಸಂಪಾದಕರು ; ಪಿ ಡಿ ಚಿಣ್ಣಪ್ಪ ವರ್ಷ = 1944-45

No.	Title of the News - Page	Subject in Brief - Date & year.	No. of Files
1	ಕೊಡಗು -	ಆಹಾರಧಾನ್ಯಗಳ ಉತ್ಪತ್ತಿಯನ್ನು ಹೆಚ್ಚಿಸುವ ವಿಷಯದಲ್ಲಿ ಸಲಹೆ ಮತ್ತು ಸೂಚನೆಗಳು - 5.5.1944	2
		ಸಂಪಾದಕರು ತಾವೇ ಹೊಲಕ್ಕಿಳಿದು ಸಾಮಾನ್ಯ ಕೂಲಿಯಾಳುಗಳಂತೆ ಕೆಲಸ ಮಾಡಿ ಮಾದರಿಯನ್ನು ತೋರಿಸಬೇಕೆಂದು ಸೂಚಿಸಿದ್ದಾರೆ.	
	— " —	ಅನಾನಸು ಹಣ್ಣಿನಲ್ಲಿ ಅಡಗಿರುವ ಔಷಧಿಯ ಬಗ್ಗೆ ಮಾಹಿತಿ - 2.6.1944	4
		- ಈ ಹಣ್ಣಿನ ಔಷಧೀಯ ಗುಣಗಳ ಬಗ್ಗೆ ಪ್ರಕಟಣೆ.	
3	— " —	ಹೊಲಿಯಾ ಜನಾಂಗದವರಿಗಾಗಿ ಕೆಲಸ್ತಾರಿ ಬಾಲಕರ ಶಾಲೆ - 9.6.1944	4
		ಬಗ್ಗೆ ಲೇಖನ - ಕೊಡವ ಸಮಾಜದ ಪ್ರತಿನಿಧಿಗಳಾಗಿ - ಸಾಂದರ್ಭಿಕ ಭಾಷಣದಲ್ಲಿ ಹುನ: ಬಂಧಿಸಿರುವರೆಗೆ? (1942) ಬಾಲಕರನ್ನು ಶಿಕ್ಷಣ ಮಾಧ್ಯಮದ ಲೇಖನ. ಪ್ರಕಟಿಸಿದ್ದು ಎಂಬ ಲೇಖನ - ಪ್ರಯೋಜನವಿಲ್ಲ.	
4	— " —	ವಿವಾಹದ ಪೂರ್ವ ಬಡ್ಡು ಶೈಕ್ಷಣಿಕ ಸಂಸ್ಥೆಗಳಿಂದ "ಸಾಂದರ್ಭಿಕ" - 16.6.1944 -	4
		ಬಗ್ಗೆ ಲೇಖನ - ಮಾಜಿ ಶಿಕ್ಷಣಾಧಿಕಾರಿಯಿಂದ "ಶಾಸ್ತ್ರೀಯ ಯುದ್ಧ" ದ ಲೇಖನ - ಯುಗಾಂತರದ ದಂತಕಥೆಯಾಗಿ ಎಂಬ ಲೇಖನ - ಪ್ರಯೋಜನವಿಲ್ಲ.	
5	— " —	ಸಾಂದರ್ಭಿಕ - ಮೆಚ್ಚಲು ಅರ್ಹವಾದ ಲೇಖನ - ಶಿಕ್ಷಣಾಧಿಕಾರಿಗಳಿಂದ - 23.6.1944 -	4
		ಯುದ್ಧದಲ್ಲಿ - ಹಳ್ಳಿಗರ ಸಾಮಾನ್ಯತ್ವ - ಪ್ರಯೋಜನವಿಲ್ಲದ ಕೆಲಸಗಾರ ಎಂಬ ಲೇಖನವನ್ನು ಯುಗಾಂತರದ ಬಗ್ಗೆ ವಿವರಣೆ - ಪ್ರಯೋಜನವಿಲ್ಲ	
6	— " —	ಕೆಸ್ತಾರಿಯಾ ಕಾರ್ಯಾಧ್ಯಕ್ಷರಿಲ್ಲ ಎಂಬ ಲೇಖನ - ಸಾಮಾನ್ಯದಿಂದ - 30.6.1944 -	4
		ಶೈಕ್ಷಣಿಕ ಪತನ ಎಂಬ ಲೇಖನ - ಸೂಕ್ತವಾದ ವಿಚಾರಧಾರೆ; ಪ್ರಯೋಜನವಿಲ್ಲದ ಪ್ರಯತ್ನಗಳು: "ಶಿಕ್ಷಣದ ಮಾಧ್ಯಮದಲ್ಲಿ ಸಾಂಘಿಕ - ಪ್ರಯತ್ನ ಸಮರ್ಥನೆ - ಪ್ರಯೋಜನವಿಲ್ಲ.	
7	— " —	ಸಾಮಾನ್ಯದಿಂದ "ಯುದ್ಧ ಕಾಡು" ಎಂಬ ಲೇಖನ - ಸಾಂದರ್ಭಿಕ - 7.7.1944 -	4
		ಮೆಚ್ಚಲು ತಕ್ಕದ್ದಲ್ಲ - ಕೆಸ್ತಾರಿಯಾ ಬಗ್ಗೆ ಸಿದ್ಧ - ಪ್ರಯೋಜನವಿಲ್ಲ.	
8	— " —	ಪತ್ರಿಕೆಗಳ ವಿಮರ್ಶೆ ಎಂಬ ಲೇಖನ - ಕಿರು ಪುಸ್ತಕ - 14.7.1944	4
		ಅಭಿಪ್ರಾಯ ಭೇದ - ಪ್ರಯೋಜನವಿಲ್ಲದ ಕೆಲಸಗಾರರಿಂದ ಪ್ರಯೋಜನವಿಲ್ಲದ ಲೇಖನ - ಪ್ರಯೋಜನವಿಲ್ಲದ ಸಾಮಾನ್ಯರಿಂದ ಪ್ರತಿಕ್ರಿಯೆಗಳು.	
9	— " —	ಅಡಿಕೆ ಸಾಮಾನ್ಯರಿಂದ - ಕೃಷಿಕರ ಸಹಾಯಕ್ಕೆ ಎಂಬ ಲೇಖನ - 21.4.1944 -	2
		ಲೇಖನ - ಸಾಮಾನ್ಯ ! - ಎಂಬ ಲೇಖನಗಳ ಪ್ರಯೋಜನವಿಲ್ಲದ ಬಗ್ಗೆ ವಿವರಣೆ ಕೊಡಿ	
10	— " —	ವಿಜ್ಞಾನದ ಕೊಂಡಿಯ ಯುದ್ಧ - ಸಾಮಾನ್ಯಾಧಿಕಾರಿಗಳಿಂದ - 28.7.1944.	2
		ಪ್ರಯೋಜನವಿಲ್ಲದ ಲೇಖನ - ಸಾಮಾನ್ಯರಿಂದ ಪ್ರಯೋಜನವಿಲ್ಲದ ಲೇಖನ	
		ಬಗ್ಗೆ ವಿವರಣೆ - ಪ್ರಯೋಜನವಿಲ್ಲದ ಸಾಮಾನ್ಯರು, ಪ್ರಯೋಜನವಿಲ್ಲ	
11	— " —	ಶಾಂತಿಯ ಪ್ರಯತ್ನ ಪ್ರಯೋಜನವಿಲ್ಲದ ಪ್ರಯತ್ನಗಳಿಂದ ಪ್ರಯೋಜನವಿಲ್ಲದ ಲೇಖನ - 4.8.1944 -	2
		ಲೇಖನ ಎಂಬ - ಸಾಂದರ್ಭಿಕ - ಪ್ರಯೋಜನವಿಲ್ಲದ ಬಗ್ಗೆ ಪ್ರಯೋಜನವಿಲ್ಲದ ಸಾಮಾನ್ಯರು ಪ್ರಯೋಜನವಿಲ್ಲ.	

→ 2.

ಬಿ.ಡಿ ಗಣಪತಿಯವರ ನೀಗ್ರೊರು
'ಕೊಂಡಸು' ಕನ್ನಡ ವಾರ ಪತ್ರಿಕೆ (ಪ್ರತಿ ಶನಿವಾರ) ಕ್ಷ
ಸಂಪಾದಕರ: ಟಿ ಆರ್ ಚಿಕ್ಕಬಾಬು. ಜಿಲ್ಲೆ: 1944 45

No. 218

No.	Title of the News — Subject in Brief — Date & year.	No of Page
2.	ಸೊಡಸು — ರಿಜಿಸ್ಟರ್ ಮಾಲು ಕಳೆದುಹೋದರ ಬಗ್ಗೆ ಲೇಖನ - 18-8 1944	- 2
	ಪ್ರೊಸಿದ್ಯಾ ಮಾಲು ರಸಾಚೆರ್ ಆದ ಬಗೆಯನ	
	ಸ್ಪಷ್ಟ ಪಡುಗಡಿಸಿ ಅಧಿಕಾರಿಗಳ ಬಗ್ಗೆ ಖ.ಗಿ.	
	ಸೈಪಿ. - ಗಾಂಧಿ - ಜಿನ್ನಾ ಮಾತುಕತೆ . ಮುಂದುವರಿದಿದೆ.	
3.	—"— - ಪಾಕಿಸ್ತಾನದ ಬಗ್ಗೆ ಲೇಖನ - ಬಕುವನ ಭಾಷಣ - 25.8 1944	- 2
	ರಂಬಚೆರ್ - ಗಾಂಧಿ-ಜಿನ್ನಾ ಚರ್ಚೆಗೆ ಹೊತ್ತಿಗೆಯಾ	
	(Rinderpest), ಮುಂದುವರಿದಿದೆ.	
14.	—"— - ಪಂಚವರ್ಷಕ್ಕೆ ರಾಜಿದ್ಧ — ಕಿಸ್ತಾಂಬಾ ನಿಧಿ — 1-9-1944	-2
	ಕಾಂಗ್ರೆಸ್ಸಿಗರ ಕರ್ತವ್ಯ. ರಂಬಚೆರ್ ಎಂಬ ಲೇಖನ	
	ವಿದ್ಯಾ ಭಂಗಾವಿಯ ಬಗ್ಗೆ ಲೇಖನ - ಮುಂದುವರಿದಿದೆ	
5.	—"— - ಪಡ್ಡು ವರ್ಷಕ್ಕೆ ಎಂಬ ಲೇಖನದ ವಿರೋಧಾಭಾಸ - 8-9-1944	- 2
	ಮಹಾರಾಷ್ಟ್ರದ ಲಿಬರಲ್ ರಾಜಕೀಯ ಪಾಲ್ಗೊಳ್ಳುವಿಕೆಯ	
	ಬಗ್ಗೆ ರಂಬಚೆರ್. ಚರ್ಚೆಯ ಬಗ್ಗೆ ಮಾಹಿತಿ ಇದೆ	
16	—"— - ಗಾಂಧಿ - ಜಿನ್ನಾ ಮಾತುಕತೆ - ಲಿಬರಲ್ಸ್ ಪ್ರತಿಕ್ರಿಯೆ - 15-9-1944	- 2
	ಬಿ ಎಂಬ ಲೇಖನದಲ್ಲಿ ಹಿಂದುವಿನ ಪ್ರಾಂತ್ಯವು ಬಗ್ಗೆ ಚರ್ಚೆಯಾಗಿದೆ.	
	ರಂಬಚೆರ್ (ರಾಜಕೀಯ ಮುದ್ಧ) ಲಿಬರಲ್ಸ್ ಪಕ್ಷದ	
	ಪ್ರತಿಕ್ರಿಯೆ. ಮುಂದುವರಿದಿದೆ	
7	—"— - ಗಾಂಧಿ - ಜಿನ್ನಾ ಮಾತುಕತೆ - ನಿಂತಹೋಯಿತು ಎಂಬ ಲೇಖನ - 22 9 1944	- 2
	ಬಿ ಎಂಬ ಲೇಖನದಲ್ಲಿ ರಾಜಕೀಯತೆ ಬಗ್ಗೆ ವಿವರಣೆ - ರಂಬಚೆರ್ -	
	ಪಾಕಿಸ್ತಾನದ ಬಗ್ಗೆ ಲೇಖನವಿದೆ	
8	—"— - ಗಾಂಧಿ-ಜಿನ್ನಾ ಮಾತುಕತೆ - ಹಿಂದೂ-ಮುಸ್ಲಿಂ ಸಮಸ್ಯೆ —	- 29-9 1944 - 2
	ಹಿಂದೂ ಸಂಸ್ಥಾನಿಯರು ಬಗ್ಗೆ ಲೇಖನ - ರಂಬಚೆರ್ -	
	ಬಿಸ್ತಾರ ಭಾಷಣ - ಮುಂದುವರಿದಿದೆ -	
9	—"— - ಗಾಂಧಿ - ಜಿನ್ನಾ ಮಾತುಕತೆಯಾದರ - ಗಾಂಧಿ ಬಗ್ಗೆ ಚರ್ಚೆ - 6.10 1944	- 2
	ರಂಬಚೆರ್. ಕೊಡಸು ಕಸ್ತಾಂಬಾ ಪ್ರಸ್ಥಾಪನೆ ಬಗ್ಗೆ - ಮುಂದುವರಿದಿದೆ	
6	—"— - ಪಾಕಿನ ನಿರ್ಣಯದ ಬಗ್ಗೆ ಲೇಖನ - ವಿವಿಧ ಕೋನದಿಂದ - 13-10 1944	-
	ಪ್ರೇಮಲತ್ತಾಬಾರ ಬಗ್ಗೆ ಲೇಖನ - ರಂಬಚೆರ್. ಕಸ್ತಾಂಬಾನಿಧಿ	
	ಮುಂದುವರಿದಿದೆ -	
11	—"— - ಕೊಂಡಸು ಪತ್ರಿಕೆ : ಪಾಕಿಸ್ತಾನದ ಪ್ರಸ್ತಾಪನೆಯ ಪ್ರಯೋಜನಗಳ ಬಗ್ಗೆ — 20.10 1944	-
	ಸಂಪಾದಕೀಯ ನಿರ್ಣಯದ - ರಂಬಚೆರ್. ಸ್ವಾತಂತ್ರ್ಯ ಪೂರ್ವದಲ್ಲಿ	
12	—"— - ಡಾ॥ ಪಿಂಪ್ಳಾಪುರ ಮಹಾಸಭೆಯ ಭಾಷಣದ ಬಗ್ಗೆ ಸಂಪಾದಕೀಯ ಲೇಖನ — 27 10 1944	-
	ಗಾಂಧಿ - ಪಾಕಿಸ್ತಾನ ಬಗ್ಗೆ ಲೇಖನ - ರಂಬಚೆರ್ - ಮುಂದುವರಿದಿದೆ	

→

ವಿ.ಡಿ. ಗಣಪತಿಸಂಬಂಧದ ಪತ್ರಗಳು
'ಕೊಡಗು' ಕನ್ನಡ ವಾರ ಪತ್ರಿಕೆ (ಪ್ರತಿಬಂಧಕಾಜ್ಞೆ) No. 218
ಸಂಪಾದಕ : ವಿ.ಎ. ಚಿಕ್ಕಬಳ್ಳಿ. ವರ್ಷ 1944-45

Sl No Title of the News — Subject in Brief — Date & year — No of Folio

32. ಕೊಡಗು - ಕಪಸ್ತಾರದ ನಿಧಿ ಹೊಗೆ ಬಡಂಬಿಸಿಕಚೀಳಲು - 23-2-1945 - 2.
ಎಂಬ ಲಕ್ಷ್ಮಿ ಗಾಂಧಿಬಾಂಬುವರ ಶಿಲಾಕೆ - ಗೌಡನ ಪಿಳ್ಳಾ
ಚೋಡಿನ ಅಧಾಗುಬೆಳ್ಳ - ಗುಪ್ತತಂದ ಲಿಬುಸ್ಥಿಂಬು
ಲಿಸ್ಥಕಿ - ಲಾಖಾವರ ಗುಪ್ತಾಲ್ಲ - ಕಿಣಿಸಾನ ಮೆಲ್ಲಿಗೆ ರಟ್ಟಾ

33 —"— - ಲಿಬುಸಾನಿಂಬುಳ್ಳಿ ಬ್ಲಾಕ ಸಮಾಜ ಒಳಗು - 1948ನೇ ಇ-2-3-1945 - 2
ಎಂಬತ್ತೊಂದು ರಬುದ್ಧ ಎಂಬ ಲೇಖನ, ಗುಪ್ತತಂದ
ಗಾತಿಬಂಸಾದೆ ಕ್ಲಾಗು ಪ್ರೀಂಟಿಗಾಂಗರುಬು ಎಚಾರಂಗ್ಳಿಕೆ,

34 —"— - ಲಿಬುಸಾನಿಂಬು ಸ್ಥಿತಿಂಬು ಬಗ್ಗೆ ಲೇಖನ - ರಬುದ್ಧ - 9-3-1945 - 2.
ವರದಿ - ಪಿದಶ ಸ್ವಾಯುದ ಬಗ್ಗೆ ಲೇಖನ -
ಎಬುಂದ ಎಚಾರಂಗ್ಳಿಕೆ.

35 —"— - ಕಿಲಿಟಾರನ ಪ್ರೇಗೆಳ್ಳಿ ಚಿಪೆಬಂಗಿ - ಎಂಬ ಲೇಖನ - 23-3-1945 - 2
ಕೊಡಸಾನ ನಿಬ್ಬಂಬು ವಿದಾಂಬುಗಳ ಪಚ್ಚಿ - ಎಬುಂಗಿದಬ್ಬ.

36 —"— - ಪಪ್ಪಾ ಪಿಯಿತಿಂಬು ಸೂಚನೆ - ರಷ್ಯಾ - ಲಿಟಾಪ ಬಗ್ಗೆ - 13-4-1945 - 2
ಲೇಖನ - ಗುಪ್ತತಂದ "ಲಿಟಾಸಿಬು 1941 ನೇಂ ವರ್ಷತಂದ್ದಾಗಿ
ಬಾಬು ಲೇಖನ - ಎಬುಂಗಿದಬ್ಬ

37 —"— - ಪದಗುವರಿಂಗೆ ಗಾಂಧೀಬಾಂಬು ಸಂದೇಶ - ರಬುದ್ಧಕ್ಷೀತ್ರ - 20-4-1945 - 2
ರಾಂಶಿವಲಕ್ಷ್ಮಣ ಸಿದ್ಧನ - ಎಬುಂಗಿದ ಅಭಿಂದ ರಾಬುಂಬುಬು
ವಿವಿಧಾನಗಳಿಂದ

38 —"— - ಸ್ವಾಮಿ ಪ್ರಾಬ್ಮಿನಿಸ್ಟ್ರಿ ಮಬಗ್ಳು ಗಾಂಧೀಬಾ - ಬಲಾನ - 27-4-1945 - 2
ದಿದಶ - ಎಬುತ್ತಿರಬ ಎಚಾರಂಗ್ಳಿಬೆ.

39 —"— - ಭಾಂಡ ರಾಜ್ಯಂಬು ಏಬಲೀಕರಣ ಎಂಬ ಲೇಖನ - 4-5-1945 - 2.
ಎಬುದಲ್ಲಿಸಲು ಬಂದ - ಕಿಲಿಟಿಂ ಎಬುಲಕ್ಷಾದ ಬಲ
ಲೇಖನ - ಎಬುಂಗಿದಬ್ಬ.

40 —"— - ಲಿಬುಸಾಬು ಎಗಿರ ಕಾಂಬುಕಿಂಬು ಗೊಂಡಲಿಂಬಾದ ಬಲ - 11-5-1945 - 2.
ಲೇಖನ - ಎಬುಂಗಿಕಿಬಳ್ಳಿ ಎಬುದ್ಧ ಎಬುಲ್ಲಿಬಾ - ಎಬುಂಗಿದಬ್ಬ

41. —"— - "ಎಬುಂಗಿಲಿಬ ಎಬುದ್ಧ ಎಬುಲ್ಲಿಬು ಚಾಂಬುಬು" ಬಲ - 18-5-1945 - 2
ಲೇಖನ - ಗೊಡಸಾ ಶೆಲ್ಲಿಚಲಿಕೆಬಾ - ಪ್ರಚಾಚಕ - ದ್ವಿತೀಬು
ಬಾ ಕಾಬುಬುಕ್ಷದ ಗಾಬುಂಬು ಕಬಚಿಕ್ಕೆ ತಲ್ಲು ಎಬುಂಗಿದಬ್ಬ

42 —"— - ಡೆವಲಾಂದ 'ಮುಂಬ್ಲೆ ಎಬುಕಾಬುದ್ಧ ನಿರ್ಣಬಂಬು' ಬಲ - 25-5-1945 - 2.
ಲೇಖನ - ಶಕ್ತಿಬಲ ಪ್ರಧಾನ ಬುಂತ್ರಿಬ್ಲಕ್ಕೆ ರಾಜಿನಾಮೆ ಕೊಡಬುದು
ಬ್ಲಾ. ಲೇಖನ - ನಿಬಾದ ರಬುದ್ಧ ಪ್ರಾಣಬಾಸಾಬುಲಿದಿಬಾದು
ಲೇಖನ - ಎಬುಂಗಿದಬ್ಬ

3 —"— - ಗಾಡಿನ ಕಿಗಿಸುಲ ಮಾರಲಿಂಗ್ - ಕಿಸಿಸುಲ ಲಭಬಾಗಾಗ್ಳು - 12-10-1945 - 2.
ಕಿಲಿಗೆ ರಾಜ್ಯಂಬು ಎಚಾರಂಗ್ಳಿಕೆ

———o———

No. 210

ಬ-ಂ ಗಣತಂತ್ರದಿಂದುವರೆ ಕರ್ನಾಟಕ
'ಕಂಠೀರವ' ಕನ್ನಡ ಪಾಕ್ಷಿಕಪತ್ರಿಕೆ (ಸ್ವಂತ ವಂತಿಗೆ)

ಸಂಪಾದಕರು: ಟಿ. ಎ. ಶೆಟ್ಟಿಗಾರ್ಯ. ವರ್ಷ: 1944-45

No.	Title of the paper	News — Subject in Brief —	Date & Year — No. of Column
23	ಕಂಠೀರವ	ತಂತಿಯ ನೀರಿಲ್ಲ ಬಗ್ಗೆ ಲೇಖನ	3.11.1944 — 2
		ರಾಜಾಜಿಯವರ ಯುದ್ಧ ಧೋರಣೆ — ಬುದ್ಧಿವಾದ ಹೇಳಿಕೆ	
24	—"—	ಕಿಂಗ್ಸ್‌ವೇ ನಿಷ್ಟೆಲ್ಲಿನ — ರದ್ದಿಯಲ್ಲಿ	10.11.1944 - 2.
		ಬೆಳ್ಳಿಪಾ — ಭಾರತದ ಬಗ್ಗೆ ಲಾರ್ಡ್ ಬುಡ್ಡಿಕರ್ ಅಭಿಪ್ರಾಯ	
		ರಾಜಾಂಗಣದಲ್ಲಿ ಕಾಂತಿದೇ.	
25	—"—	ಶ್ರೀಮತಿ ಅನ್ನಿಬೆಸೆಂಟ್ ರಾಜಕೀಯ — ವಿ.ಎ. ಧನಾತ್ಮಕ ದೃಷ್ಟಿ	17.11.1944-2.
		ಗೋವಾದ ಬಗ್ಗೆ ಲೇಖನ — ಅಮೆರಿಕಾದ ಮುಖವಾಣಿ	
		ಅದಿಂತಿಯ ಬಗ್ಗೆ ಲೇಖನ — ಮೆಚ್ಚುಗೆಯ	
6	—"—	ಯುದ್ಧಾನಂತರ ೫ ವರ್ಷಾಭಿವೃದ್ಧಿಯ ಬಗ್ಗೆ ಲೇಖನ	8.12.1944 - 2
		ಬೆಳ್ಳಿನಾದ ಶೆಟ್ಟಿಯವರಿಗೆ ಕೈಕೆ — ಕುರಿತು ರಾಜಾಂಗಣದಲ್ಲಿ	
		ವಿಚಾರಗೋಷ್ಠಿ.	
27	—"—	ಲಂಚಕೋರತನದ ಬಗ್ಗೆ ಲೇಖನ - ಶ್ರೀ ಸಂಪುಟದಿಂದ	29.12.1944-2.
		'ಭವಿಷ್ಯನಗರ ಬೆಂಗಳೂರು ಪ್ರೊಜೆಕ್ಟ್' ಅಭಿವೃದ್ಧಿ-ಮಂಡಳಿಯ	
		ಬಂಬಿಲ್ಲು ನಿಧಾನ - ಮಿಶ್ರ ಸಂಪಾದಕತ್ವದ ಪಿನ್ಸೈಕಿತೆ "ಪಾ ಲ್	
		ಲೇಖನ - ಮಂಡಿಸಿದವ್ಯ.	
28	—"—	ರಂಜಕ ಕ್ಷಾಚನ ಫ್ಯಾಕ್ಟರಿ ಬಗ್ಗೆ ಮಂಡಲ ಲೇಖನ	ಲೇ-19.1.1945 - 1.
		ಸಾಮ್ರಾಜ್ಯದ ರಕ್ಷಿಸಲುಬಳಿಗೆ ಮುತ್ತಿಗೆ ಗಾಂಧಿಯ	
		ಎಚ್ಚರಿಕೆ = ಬಗ್ಗೆ	
29	—"—	ಶೇಕಡಾವಾರು ಶಿಷ್ಯವೇತನ ಸೌಲಭ್ಯ ಗಳಿಗೆ — "ಜನವರಿ 26"	26.1.1945. 2
		ರ ಬಗ್ಗೆ ಲೇಖನ - ಸಂಪ್ರದಾಯ ಭವಿಷ್ಯನಗರ ಅತ್ಯಾವಶ್ಯಕ)	
		ದಾಳಿ - ರಂಜಿಸುವ ಲಾಟ್ಸ್‌ಗಳು - ಮಂಡಿಸಿದವ್ಯ	
30	—"—	ದಾಸ್ಯದ ಸಂಕೋಲೆಯಿಂದ ಕಾಣಬೇಕಿದೆ — ರಾಜಕೀಯ	2.2.1945. 2
		ಒಬ್ಬರಿಂದ - ಶಿಕ್ಷಣಕ್ಕೆ ಮಾಡಿಕೊಂಡ. ಪ್ರಗತಿಯ ಪ್ರಭಾವದ	
		ದಸ್ತಗಿರಿಯ - ಮಂಡಿಸಿದವ್ಯ	
31	—"—	ಬಲೂನ್ಸ್‌ಗಳ ಸಂಪರ್ಕಾಂತರ — ೧೦೦೦ ಸಲುಕಿಸಿದರು -	9.2.1945-2
		ಪ್ರಯೋಗ — ಮಂಡಿಸಿದವ್ಯ.	
32	—"—	ಕೆಲಸಕ್ಕಾಗಿ ಭಾರ ಹೆಚ್ಚಳದ — ಭಯ ಮುಕ್ತ —	16.2.1945. 2.
		ಪತ್ರಿಕಾದ ಮೇಲೆ ರಕ್ಷಣಾ ದೃಷ್ಟಿಯ ಪ್ರಭಾವ.	
		ವಿಂಗ್ಸ್‌ನ ತೆಳ್ಳಲಿ ಭಾವ - ಪಾಲುಸಿಯಾಚಿಕ್ಕ ತೆಳ್ಳ	
		ನೈಪಲ್ಸ್ ಮಂ - ಲೇಖನ ಮಂಡಿಸಿದವ್ಯ	→ 4.